# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 282 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 18.05.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 282 • PRGI No:KARKAN/2023/88055 • VIJAYANAGARA • 18.05.2025 • Sunday • Page:04 • Rs:2



1,30,000+
Digital E-PAPER READERS
To book Classified Display Ad
in HAMPI TIMES
Please call on
9448633038



No.1 HAMPI TIMES LEADING PRINT & DIGITAL District News Paper


## ನಿನಗೆ ನೀನೇ ಬೆಳಕು

ಮನಸ್ಸು ಎಲ್ಲದಕ್ಕೂ ಮೂಲ,
ಅದನ್ನು ಸರಿಪಡಿಸಿಕೊಳ್ಳದ ಹೊರತು
ಇನ್ನಾವುದು ಸರಿಯಾಗದು
– ಡಿ.ವಿ.ಜಿ

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಮೈಕ್ರೋ ನ್ಯೂಸ್

### ಡಾ.ವೀರೇಶ ಬಡಿಗೇರ ಅವರ ಚರ್ಮವಾದ್ಯಗಳು ಕೃತಿ ರಾಷ್ಟ್ರೀಯ ಪುಸ್ತಕ ಪ್ರಶಸ್ತಿಗೆ ಆಯ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**



ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗ ಕೊಡಮಾಡುವ ಪುಸ್ತಕ ಪ್ರಶಸ್ತಿ ವಿಭಾಗದಲ್ಲಿ ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ಪ್ರಕಟ ವಾಗಿರುವ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಹಿರಿಯ ಪ್ರಾಧ್ಯಾಪಕರಾಗಿರುವ ಡಾ.ವೀರೇಶ ಬಡಿಗೇರ ಅವರ ಕೃತಿ ಚರ್ಮವಾದ್ಯಗಳು ರಾಷ್ಟ್ರೀಯ ಪುಸ್ತಕ ಪ್ರಶಸ್ತಿಗೆ ಆಯ್ಕೆಯಾಗಿರುತ್ತದೆ. ರಾಯಚೂರಿನಲ್ಲಿ 28 ಹಾಗೂ 29ನೇ ಜೂನ್ 2025ರಂದು ನಡೆಯುವ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಡಾ.ವೀರೇಶ ಬಡಿಗೇರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ದಲಿತ ಸಾಹಿತ್ಯ ಪರಿಷತ್ತು, ರಾಜ್ಯ ಘಟಕ, ಗದಗದ ಅಧ್ಯಕ್ಷರಾದ ಡಾ.ಅರ್ಜುನ ಗೊಳಸಂಗಿ ಅವರು ತಿಳಿಸಿದ್ದಾರೆ.

### ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ ಸಮೀಕ್ಷೆ ಕಾರ್ಯ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ನ್ಯಾಯಮೂರ್ತಿ ಡಾ. ಹೆಚ್.ಎನ್. ನಾಗಮೋಹನ ದಾಸ್ ಅವರ ಏಕ ಸದಸ್ಯ ವಿಚಾರಣಾ ಆಯೋಗದ ನಿರ್ದೇಶನದಂತೆ ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ ಸಮೀಕ್ಷೆ ಕಾರ್ಯವು ಪ್ರಸ್ತುತ ಪ್ರಗತಿಯಲ್ಲಿದೆ. ಶಾಸಕರು, ಹಲವು ಸಂಘ–ಸಂಸ್ಥೆಗಳು ಸಮೀಕ್ಷೆ ವೇಳೆ ಉದ್ಭವಿಸಿರುವ ಕೆಲವೊಂದು ಸಮಸ್ಯೆಗಳನ್ನು ಸರಿಪಡಿಸಲು ಸಮೀಕ್ಷಾ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿರುವ ಹಿನ್ನಲೆಯಲ್ಲಿ ಸಮೀಕ್ಷಾ ಕಾರ್ಯದ ಅವಧಿಯನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

*ವಿಸ್ತರಣಾ ಅವಧಿ:*

ಮನೆ–ಮನೆ ಭೇಟಿ ನೀಡಿ ಸಮೀಕ್ಷೆಯು ಮೇ 25 ರವರೆಗೆ ವಿಸ್ತರಣೆ. ವಿಶೇಷ ಶಿಬಿರ >>4

# ಬ್ರಹ್ಮೋಸ್ ಕ್ಷಿಪಣಿ ಯಶಸ್ವಿ ಸ್ವದೇಶಿ ಯುದ್ಧ ಸಾಮಗ್ರಿಗೆ ಹೆಚ್ಚಿದ ಬೇಡಿಕೆ

## ಕೌಶಲ್ಯವಿದ್ದವರಿಗೆ ಉದ್ಯೋಗ : ಕರಿ ಬಸವರಾಜ ಬಾದಾಮಿ



**ಹಂಪಿ ಟೈಮ್ಸ್ ಹೊಸಪೇಟೆ**

ಆನ್ಲೈನ್ ಪದವಿ ಎಷ್ಟು ಸೂಕ್ತ, ಕಲಿಕೆ ಎನ್ನುವುದು "ಇಂದಿನ ಇಂಟರ್ನೆಟ್ ಯುಗದಲ್ಲಿ ಕಲಿಕೆಗೆ ಹೆಚ್ಚಿನ ಅವಕಾಶಗಳಿವೆ. ಆದರೆ ನಿರ್ದಿಷ್ಟ ಪಠ್ಯಕ್ರಮದ ಕೊರತೆಯಿಂದ ಅದು ಸಮರ್ಥವಾಗಿ ಉಪಯೋಗವಾಗುತ್ತಿಲ್ಲ. ವಿದ್ಯಾರ್ಥಿಗಳು ತಮ್ಮ ಅಗತ್ಯತೆಗಳನ್ನು ಗುರುತಿಸಿ, ಸೂಕ್ತ ಆನ್‌ಲೈನ್ ಸಂಪನ್ಮೂಲಗಳನ್ನು ಆರಿಸಿಕೊಂಡು ಕಲಿಕೆಯನ್ನು ಮುಂದುವರಿಸಿದರೆ ಕೌಶಲ್ಯ ಸಂಪಾದನೆ ಸಾಧ್ಯ" ಎಂದು ಐಐಐಟಿ ಧಾರವಾಡದ ನಿರ್ದೇಶಕರಾದ ಡಾ.ಎಸ್ ಆರ್ ಮಹಾದೇವ ಪ್ರಸನ್ನ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಾರ್ಷಿಕೋತ್ಸವ 'ಸಿಂಚನ –2025'ರ ಅಂಗವಾಗಿ ಶನಿವಾರ ಪದವಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ತಂತ್ರಜ್ಞಾನದ ಅಡೆತಡೆ ದಾಟಲು ಪ್ರಾಯೋಗಿಕ ಕೌಶಲ್ಯದ ಅಗತ್ಯತೆ ಇದೆ. ಪದವಿ ಶಿಕ್ಷಣ ಅಪೂರ್ಣತೆಯಿಂದ ಕೂಡಿದ್ದು, ಬಹುತ್ವ ಕೇಂದ್ರಿತ ಕಲಿಕೆಯಿಂದ ಈ ಅಪೂರ್ಣತೆಯನ್ನು ದಾಟಬೇಕು. ಡೇಟಾ ಸೈನ್ಸ್ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳು ಈ ತಂತ್ರಜ್ಞಾನದ ಅಡೆತಡೆಗಳನ್ನು ನಿವಾರಿಸಲು ನೆರವಾಗುತ್ತವೆ ಎಂದರು.

ಪಿಡಿಐಟಿಯ ಆಡಳಿತ ಮಂಡಳಿ ಅಧ್ಯಕ್ಷ ಕರಿಬಸವರಾಜ್ ಬಾದಾಮಿ ಅಧ್ಯಕ್ಷತೆವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಪದವಿ ಪಡೆದ ಮಾತ್ರಕೆ ಉದ್ಯೋಗಕ್ಕೆ ಅರ್ಹತೆ ಪಡೆಯುವದಿಲ್ಲ. ತಮ್ಮನ್ನು ತಾವು ಪರಿಣಾಮಕಾರಿಯಾಗಿ ಪ್ರಸ್ತುತ ಪಡಿಸಬೇಕು. ಈ ದಿಸೆಯಲ್ಲಿ ಹಳೆಯ ವಿದ್ಯಾರ್ಥಿಗಳ ಜೊತೆ ಸಂಹವನ ನಡೆಸಿ ಅವರ ಅನುಭವದ ಲಾಭ ಪಡೆಯಬೇಕು. ಕಾಲೇಜಿನ ಜೊತೆಗಿನ ಭಾವನಾತ್ಮಕ ಸಂಬಂಧ ಹಾಗೆಯೇ ಮುಂದುವರೆಯಬೇಕು. ಇಂದು ಸ್ವದೇಶೀ ನಿರ್ಮಿತ ಯುದ್ಧ ಸಾಮುಗ್ರಿಗಳಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಬ್ರಹ್ಮೋಸ್ ಕ್ಷಿಪಣಿಯ ಯಶಸ್ಸಿನಿಂದ ಅನೇಕ ದೇಶಗಳು ನಮ್ಮ ರಕ್ಷಣಾ ವಿಭಾಗವನ್ನು ಸಂಪರ್ಕಿಸಿವೆ. ಅಂತಹ ಕ್ಷೇತ್ರದಲ್ಲಿ ಈಗಿನ ಇಂಜಿನಿಯರಗಳಿಗೆ ಹೆಚ್ಚಿನ ಬೇಡಿಕೆ ಇದೆ. ಜ್ಞಾನಶಕ್ತಿ ರಾಷ್ಟಶಕ್ತಿ ಆಗಬೇಕು. ನಮ್ಮ ಶಿಕ್ಷಣ ಸಂಸ್ಥೆಯಿಂದ ಐಎಎಸ್/ಐ.ಪಿ.ಎಸ್ ಅಕಾಡೆಮಿ ಕೋಚಿಂಗ್ ಕೊಡುವ ಯೋಜನೆ ಇದೆ ಎಂದು ತಿಳಿಸಿದರು.

ಪಿಡಿಐಟಿಯ ಪ್ರಾಂಶುಪಾಲ ಡಾ.ರೋಹಿತ್ ಯು.ಎಂ ಸ್ವಾಗತಿಸಿದರು, ನೂತನ ಪದವಿಧರರಿಗೆ ಪ್ರತಿಜ್ಞಾ ವಿಧಿ ಭೋದಿಸಿದರು. ಪದವಿ ದಿನಾಚರಣೆಯ ಸಂಯೋಜಕರಾದ ಪ್ರೊ. ಮಾಲತೇಶ ಕಮತರ್ ಪರಿಚಯಿಸಿದರು. ಎನ್.ಸಿ.ಸಿ. ಪಡೆಗಳ ಜೊತೆಯಲ್ಲಿ ಪದವಿ ವಿದ್ಯಾರ್ಥಿಗಳ ಆಕರ್ಷಕ ಮೆರವಣಿಗೆ ನಡೆಸಲಾಯಿತು. ಬಿ.ಇ. ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದರು.

ಪಿಡಿಐಟಿಯ ಆಡಳಿತ ಮಂಡಳಿಯ ಸದಸ್ಯರಾದ ಐ ಎನ್ ಸಂಗನಬಸಪ್ಪ, ಅನಿಲ್ ಆರ್ ಜವಳಿ, ಬಿ ಚಂದ್ರಮೌಳಿ, ಹಾಗೂ ವೀ ವೀ ಸಂಘದ ಕಾರ್ಯಕಾರಿ ಮಂಡಳಿಯ ಮಾಜಿ ಸದಸ್ಯರಾದ ವಿರೂಪಾಕ್ಷ ರೆಡ್ಡಿ, ಉಪಪ್ರಾಂಶುಪಾಲರಾದ ಡಾ.ಪಾರ್ವತಿ ಕಡ್ಲಿ ಹಾಗೂ ಕಾರ್ಯಕ್ರಮದ ಸಂಯೋಜಕರಾದ ಡಾ.ವಸಂತಮ್ಮ ಹೆಚ್ ಮತ್ತು ಪದವಿ ದಿನಾಚರಣೆಯ ಸಂಯೋಜಕರಾದ ಪ್ರೊ. ಮಾಲತೇಶ ಕಮತರ್ ಮುಂತಾದ ಗಣ್ಯರು ಉಪಸ್ಥಿತರಿದ್ದರು ಕಾಲೇಜಿನ ಎಲ್ಲಾ ವಿಭಾಗದ ಮುಖ್ಯಸ್ಥರು, ಬೋಧಕ ಮತ್ತು ಭೋಧಕೇತರ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

ಪ್ರೊ.ಇಂದಿರಾ, ಪ್ರೊ.ಮಫಿತಾ, ಪ್ರೊ.ಫಿರ್ದೋಶ್ ನಿರ್ವಹಿಸಿದರು.

# ದೂರಸಂಪರ್ಕ ಸಾಮಾನ್ಯರ ಬದುಕಿಗೆ ವರದಾನ

## ಇನ್‌ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮುನಿರಾಬಾದ್ ಕೇಂದ್ರದ ಅಧ್ಯಕ್ಷ ಡಾ. ಎಸ್.ಎಂ. ಶಶಿಧರ್ ಹೇಳಿಕೆ




**ಹಂಪಿ ಟೈಮ್ಸ್ ಬಳ್ಳಾರಿ**

"ದೂರಸಂಪರ್ಕ ತಂತ್ರಜ್ಞಾನವು ಇಂದಿನ ದಿನಗಳಲ್ಲಿ ಜನಸಾಮಾನ್ಯರ ಬದುಕಿಗೆ ನಿಜವಾದ ವರದಾನವಾಗಿದೆ" ಎಂದು ಇನ್‌ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮುನಿರಾಬಾದ್ ಸ್ಥಳೀಯ ಕೇಂದ್ರದ ಅಧ್ಯಕ್ಷ ಡಾ. ಎಸ್.ಎಂ. ಶಶಿಧರ್ ಹೇಳಿದರು.

ಅವರು ಇನ್‌ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮುನಿರಾಬಾದ್ ಕೇಂದ್ರ ಮತ್ತು ವೀ.ವಿ.ಸಂಘದ ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್‌ನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗದ ಸಹಯೋಗದಲ್ಲಿ ಪಾಲಿಟೆಕ್ನಿಕ್ ಸಭಾಂಗಣದಲ್ಲಿ ಶನಿವಾರದಂದು ಆಯೋಜಿಸಿದ್ದ 'ವಿಶ್ವ ದೂರ ಸಂಪರ್ಕ ದಿನಾಚರಣೆ' ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

"5ಜಿ ಕೇವಲ ಸ್ಮಾರ್ಟ್ಫೋನ್ ಬಳಕೆಯನ್ನು ವೇಗಗೊಳಿಸುವುದಲ್ಲ. ಇವತ್ತಿನ ತಂತ್ರಜ್ಞಾನ 'ಇಂಟರ್‌ನೆಟ್ ಆಫ್ ಥಿಂಗ್ಸ್' ರೂಪದಲ್ಲಿ ಎಲ್ಲವನ್ನೂ ಜಾಲವಾಗಿ ಜೋಡಿಸುತ್ತಿದೆ. ನಾವು ಕನಸು ಕಂಡಿದ್ದ ಸ್ಮಾರ್ಟ್ ಜಗತ್ತು ನಮ್ಮ ಬೆರಳ ತುದಿಗೆ ಬಂದಿದೆಯೆಂದು ಹೇಳಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಈ ತಂತ್ರಜ್ಞಾನ ಶಿಕ್ಷಣ, ಆರೋಗ್ಯ, ಕೃಷಿ ಮತ್ತು ಮತ್ತು ಜೀವನೋಪಾಯದಲ್ಲಿ ಹೊಸ ಅವಕಾಶಗಳನ್ನು ತರುತ್ತಿದೆ. 2030ರ ವೇಳೆಗೆ ಲಭ್ಯವಾಗುವ 6ಜಿ, 5ಜಿಗಿಂತ ಸುಮಾರು ಸಾವಿರ ಪಟ್ಟು ವೇಗವಾಗಿ ಡೇಟಾವನ್ನು ಸಾಗಿಸಲಿದೆ. ಇದು ಜನರ ಜೀವನಶೈಲಿಯನ್ನು ಪುನರ್ರೂಪಿಸುವ ಒಂದು ಕ್ರಾಂತಿಕಾರಿ ಬದಲಾವಣೆ" ಎಂದು ಡಾ. ಎಸ್.ಎಂ. ಶಶಿಧರ್ ತಿಳಿಸಿದರು.

ವಿಶೇಷ ಉಪನ್ಯಾಸ ನೀಡಿದ ಬಳ್ಳಾರಿಯ ಆರ್‌ವೈಎಂಇಸಿ ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಡಾ. ಎಸ್. ಪ್ರಭಾವತಿ "ತಂತ್ರಜ್ಞಾನದಲ್ಲಿ ಮಹಿಳೆಯರ ಭಾಗವಹಿಸುವಿಕೆ ಇಂದು ಅತ್ಯಗತ್ಯವಾಗಿದೆ. ಮಹಿಳೆಯರು ಡಿಜಿಟಲ್ ಕೌಶಲ್ಯಗಳನ್ನು ಕಲಿತು ತಮ್ಮ ಕುಟುಂಬ ಮತ್ತು ಸಮಾಜವನ್ನು ಮುನ್ನಡೆಸಬಹುದು" ಎಂದು ಹೇಳಿದರು. ಹೆಲ್ವೆಟ್ ಪ್ಯಾಕರ್ಡ್ ಕಂಪೆನಿಯ ಹಿರಿಯ ಎಂಜಿನಿಯರ್ ಕೆ.ಎಂ. ನಂದೀಶ್ ಮಾತನಾಡುತ್ತಾ, "ದೂರಸಂಪರ್ಕ ತಂತ್ರಜ್ಞಾನವು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಬೆಳವಣಿಗೆಗೆ ಶಕ್ತಿದಾಯಕ ಸಾಧನವಾಗಿದೆ. ಇದನ್ನು ಸಮರ್ಥವಾಗಿ ಬಳಸಿದಾಗ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಮಾರ್ಗ ಸಿದ್ಧವಾಗುತ್ತದೆ" ಎಂದು ಅಭಿಪ್ರಾಯಪಟ್ಟರು.

ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್‌ನ ಪ್ರಾಂಶುಪಾಲ ಬಿ. ಶ್ರೀಶೈಲಗೌಡ ಕಾರ್ಯಕ್ರಮಕ್ಕೆ ಸ್ವಾಗತ ಕೋರಿದರು. ಹೇಮಂತ್ ಕುಮಾರ್ ಅತಿಥಿಗಳನ್ನು ಪರಿಚಯಿಸಿದರು. ಉಮ್ಮೆ ಸಲ್ಮಾ ವಂದನಾರ್ಪಣೆ ಸಲ್ಲಿಸಿದರು. ಗೌಸಿಯಾ ಬೇಗಂ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಪಾಲಿಟೆಕ್ನಿಕ್‌ನ ಸಿಬ್ಬಂದಿ ವರ್ಗ ಹಾಗೂ ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದ್ದರು.

# ಆಪರೇಷನ್ ಸಿಂಧೂರ ಯಶಸ್ವಿಗೆ ಭಾರತೀಯ ಸೇನೆ ಬೆಂಬಲಿಸಿ ತಿರಂಗ ಮೆರವಣಿಗೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಭಾರತೀಯ ಸೇನೆಯ ಆಪರೇಷನ್ ಸಿಂಧೂರಕ್ಕೆ ಜಯವಾಗಲೆಂದು ದೇಶಾಭಿಮಾನಿಗಳು ಶನಿವಾರ ನಗರದಲ್ಲಿ ಆಪರೇಶನ್ ಸಿಂಧೂರ ಬೃಹತ್ ಮೆರವಣಿಗೆ ನಡೆಸಿದರು.

ನಗರಸಭೆ ಅಧ್ಯಕ್ಷ ರೂಪೇಶ ಕುಮಾರ ಮಾತನಾಡಿ, ಪಾಕಿಸ್ತಾನ ಪೋಷಿತ ಉಗ್ರರರನ್ನು ಹುಡುಕಿ ಹೊಡೆಯುವಲ್ಲಿ ಆಪರೇಷನ್ ಸಿಂಧೂರ ಯಶಸ್ವಿಯಾಗಿದೆ. ಭಾರತವನ್ನು ಕೆಣಕಿದರೆ ಏನಾಗುತ್ತದೆ ಎಂಬುದನ್ನು ಭಾರತೀಯ ವಿವಿಧ ಸೇನಾ ಸೈನಿಕರು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಭಾರತೀಯರು ಶಾಂತಿಪ್ರಿಯರು, ವಿನಾಃಕಾರಣ ತಡವಿದರೆ ಕ್ರಾಂತಿಗೂ ಸೈ ಎಂಬುದನ್ನು ತೋರಿಸಿಕೊಟ್ಟಿದೆ. ಪ್ರತಿಯೊಬ್ಬರೂ ದೇಶಪ್ರೇಮ ಬೆಳೆಸಿಕೊಳ್ಳಬೇಕು. ಭಾರತ ಮಾತೆಯ ನೆಲದಲ್ಲಿ ಅನ್ನ, ನೀರು, ಗಾಳಿ ಸೇವಿಸಿ ಬದುಕುತ್ತಿರುವ ಪ್ರತಿಯೊಬ್ಬರಲ್ಲೂ ದೇಶದ ಸೇನಾಗಳ ಬಗ್ಗೆ ಹೆಮ್ಮೆ ಪಡಬೇಕು ಎಂದರು.

ನಗರದ ವಡಕರಾಯ ದೇಗುಲದಲ್ಲಿ ಆಂಜನೇಯಸ್ವಾಮಿ ದೇವರಿಗೆ ಪೂಜೆ ಸಲ್ಲಿಸಿ, ಆಪರೇಷನ್ ಸಿಂಧೂರ ಮೆರವಣಿಗೆಗೆ ಚಾಲನೆ ನೀಡಲಾಯಿತು. ಡಾ.ಬಿ.ಆರ್.ಅಂಬೇಡ್ಕರ್ ಸರ್ಕಲ್ ವರೆಗೆ ನಡೆದ ಮೆರವಣಿಗೆಯಲ್ಲಿ ಸೇನೆಗೆ ಜಯಘೋಷಗಳನ್ನು ಕೂಗಿ ಬೆಂಬಲ ವ್ಯಕ್ತಪಡಿಸಿದರು. ಮೆರವಣಿಗೆಯಲ್ಲಿ, ಯುವ ಮುಖಂಡರಾದ ಕಿಚಿಡಿ ಕೊಟ್ರೇಶ್, ಅಶ್ವಿನ್ ಕೋತಂಬ್ರಿ, ಭೂಪಾಲ ಪ್ರಹ್ಲಾದ್ ಸೇರಿದಂತೆ ವಿವಿಧ ಸಂಘಟನೆ, ಪಕ್ಷಗಳ ಕಾರ್ಯಕರ್ತರು, ನೂರಾರು ಜನ ಭಾರತೀಯ ತಿರಂಗ ಹಿಡಿದು ಹೆಜ್ಜೆ ಹಾಕಿದರು.

# ಶಾಲೆ ಬಳಿ ಕರಡಿ ದಾಳಿ ಯುವಕನಿಗೆ ಗಂಭೀರ ಗಾಯ

**ಹಂಪಿ ಟೈಮ್ಸ್ ಕೂಡ್ಲಿಗಿ**



ತಾಲೂಕಿನ ಚಿಕ್ಕಜೋಗಿಹಳ್ಳಿ ಗ್ರಾಮದ ನವೋದಯ ಶಾಲೆಯ ಕಾಪೌಂಡು ಹಿಂಭಾಗದಲ್ಲಿದ್ದ ಕರಡಿಯೊಂದು ಹಠಾತ್ತನೆ ಯುವಕನ ಮೇಲೆ ದಾಳಿ ಮಾಡಿದ ಘಟನೆ ಶನಿವಾರ ಸಂಜೆ:4–30ರ ಸಮಯದಲ್ಲಿ ನಡೆದಿದೆ.

ಅರಣ್ಯ ಸಿಬ್ಬಂದಿಗಳು ಕರಡಿಯನ್ನು ಮರಳಿ ಕಾಡಿನೊಳಕ್ಕೆ ಓಡಿಸುವಾಗ, ಅಲ್ಲಿದ್ದ ಯುವಕರನ್ನು ನೋಡಿ ಗಾಬರಿಯಾದ ಕರಡಿ ಹಠಾತ್ತನೆ ದಾಳಿ ಮಾಡಿದೆ. ಇದರಿಂದ ಲೋಹಿತ್(24) ಯುವಕನಿಗೆ ಬೆನ್ನಿನ ಮೇಲೆ, ಮೊಳಕಾಲಿನ ಕೆಳ ಭಾಗದಲ್ಲಿ ಕರಡಿಯ ಉಗುರಗಳಿಂದ ತಿರುಚುಗಾಯಗಳಾಗಿವೆ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಪರಿಹಾರಕ್ಕೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ವಲಯ ಅರಣ್ಯಾಧಿಕಾರಿ ಸಂದೀಪ ನಾಯಕ ಮಾಹಿತಿ ನೀಡಿದ್ದಾರೆ.

# ಗಾಳಿಗೆ ನೆಲಕಚ್ಚಿದ ಸಮರ್ಪಣ ಸಂಕಲ್ಪ ಸಮಾವೇಶ ಸ್ವಾಗತ ಬ್ಯಾನರ್



**ಹೊಸಪೇಟೆಯಲ್ಲಿ ಮೇ 20 ಕಾಂಗ್ರೆಸ್ ಸರ್ಕಾರ ಎರಡು ವರ್ಷದ ಸಾಧನಾ ಸಮಾವೇಶ, ಸಮರ್ಪಣ ಸಂಕಲ್ಪ ಸಮಾರಂಭ ಹಮ್ಮಿಕೊಂಡಿದ್ದು, ಶನಿವಾರ ಬೀಸಿದ ಗಾಳಿಗೆ ಬ್ಯಾನರ್ ನೆಲಕಚ್ಚಿದ್ದು, ಜನರಲ್ಲಿ ನಾನಾ ಚರ್ಚೆಗಳಿಗೆ ಗ್ರಾಸವಾಗಿದೆ.**

# ಬೇಸಿಗೆಯ ಕೊನೆ, ಮಳೆಗಾಲದಲ್ಲಿ ಡೆಂಘೆ ಹೆಚ್ಚಳ–ಎಚ್ಚರಿಕೆ ಅಗತ್ಯ

## ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿಕೆ। ವಿಶ್ವ ಡೆಂಘೆ ದಿನಾಚರಣೆ– ಜಾಗೃತಿಗೆ ಚಾಲನೆ

**ಹಂಪಿ ಟೈಮ್ಸ್ ಕೂಡ್ಲಿಗಿ**




ಹೆಣ್ಣು ಈಡಿಸ್ ಈಜಿಪ್ಟಿ ಸೊಳ್ಳೆ ಕಡಿತದಿಂದ ಡೆಂಘ್ಯೆ ವೈರಸ್ ಸೋಂಕು ಹರಡುತ್ತದೆ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆ ಹಮ್ಮಿಕೊಂಡ ವಿಶ್ವ ಡೆಂಘೆ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಡೆಂಘೆ ಜ್ವರದ ಅಪಾಯಗಳು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ರೋಗ ಲಕ್ಷಣ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ದೇಶದಲ್ಲಿ ಪ್ರತಿ ವರ್ಷ ಡೆಂಘೆ ದಿನಾಚರಣೆ ಆಚರಣೆ ಮಾಡಲಾಗುತ್ತದೆ. ಬೇಸಿಗೆಯ ಕೊನೆಯಲ್ಲಿ ಮತ್ತು ಮಳೆಗಾಲದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಪ್ರಮಾಣದಲ್ಲಿ ಡೆಂಘೆ ಪ್ರಕರಣಗಳು ವರದಿಯಾಗುತ್ತವೆ.

ಸೊಳ್ಳೆ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ನೀರು ಶೇಖರಣೆಯಾಗುವ ಯಾವುದೇ ಪ್ರದೇಶವಿದ್ದರೂ, ಶುಚಿಗೊಳಿಸುವುದು ಅಗತ್ಯ. ಜತೆಗೆ, ಮನೆ, ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಸೊಳ್ಳೆ ನಿವಾರಕ ಬಳಕೆಯೂ ಸೂಕ್ತವಾಗಿದೆ. ಈ ರೋಗ ಲಕ್ಷಣಗಳು ಸಾಮಾನ್ಯವಾಗಿ ಜ್ವರ, ತಲೆನೋವು, ವಾಂತಿ, ಕಣ್ಣು ಊದಿಕೊಂಡು ನೋವು ಉಂಟಾಗುವುದು, ಕೈ, ಕಾಲುಗಳಲ್ಲಿ ಸೆಳೆತ, ನೋವು, ಆಯಾಸ ಉಂಟಾಗಬಹುದು. ಹೀಗಾಗಿ ಸೊಳ್ಳೆ ನಿಯಂತ್ರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಮನೆ, ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಸೊಳ್ಳೆ ನಿವಾರಕ ಬಳಕೆ ಮಾಡಬೇಕು ಎಂದು ತಿಳಿಸಿದರು. ಟಿಎಚ್‌ಒ ಡಾ.ಎಸ್.ಪಿ.ಪ್ರದೀಪ್ ಕುಮಾರ್, ಅಡಳಿತ ವೈಧ್ಯಾಧಿಕಾರಿ ಡಾ.ಮಧು, ವೈದ್ಯರಾದ ಡಾ.ರವಿಕುಮಾರ್, ಮನ್ಸೂರ್ ಅಲಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಜಗದೀಶ್, ಕೆ.ಸುನೀತಾ, ಆರ್ ಕೆ ಎಸ್ ಕೆ ಆಪ್ತ ಸಮಾಲೋಚಕ ಓಬಣ್ಣ, ಕೊಟ್ರೇಶ್ ಇತರರಿದ್ದರು.

# ವಿದ್ಯಾ ಮೃತ್ಯುಂಜಯ ರುಮಾಲೆ ನಿಧನ



**ಹೊಸಪೇಟೆ:** ವಿಜಯನಗರ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರು, ಹಿರಿಯ ಸಾಹಿತಿ ಡಾ. ಮೃತ್ಯುಂಜಯ ರುಮಾಲೆ ಇವರ ಧರ್ಮಪತ್ನಿ ಶ್ರೀಮತಿ ವಿದ್ಯಾ ಮೃತ್ಯುಂಜಯ ರುಮಾಲೆ(56) ಶನಿವಾರ ಮಧ್ಯಾಹ್ನ ಬೆಂಗಳೂರಿನ ಎಂ.ಎಸ್ ರಾಮಯ್ಯ ಆಸ್ಪತ್ರೆಯಲ್ಲಿ ಲಿಂಗೈಕ್ಯರಾಗಿದ್ದಾರೆ. ಮೃತರ ಶರೀರವನ್ನು ಎಂ.ಎಸ್ ರಾಮಯ್ಯ ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಗಿದೆ ಎಂದು ಪತಿ ಡಾ.ಮೃತ್ಯುಂಜಯ ರುಮಾಲೆ ತಿಳಿಸಿದ್ದಾರೆ.

# ಗ್ಯಾರಂಟಿ ಯೋಜನೆಗಳ ಯಶಸ್ಸಿನಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳ ಶ್ರಮವಿದೆ:ಸಿಎಂ

## ಜಿಎಸ್ ಟಿ ಸಂಗ್ರಹಣೆಯಲ್ಲಿ ದೇಶದಲ್ಲಿ ಪ್ರಥಮ ಸ್ಥಾನ ಗಳಿಸಲು ಪ್ರಯತ್ನಿಸಿ



**■ ಹಂಪಿ ಟೈಮ್ಸ್ ಬೆಂಗಳೂರು**

ಜಿಎಸ್ಟಿ ಸಂಗ್ರಹಣೆಯಲ್ಲಿ ಕರ್ನಾಟಕ ರಾಜ್ಯ ದೇಶದಲ್ಲಿ ದ್ವಿತೀಯ ಸ್ಥಾನದಲ್ಲಿದ್ದು, ಮುಂದಿನ ದಿನಗಳಲ್ಲಿ ಮೊದಲ ಸ್ಥಾನಕ್ಕೆ ಬರಲು ಪ್ರಯತ್ನಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ತಿಳಿಸಿದರು.

ಅವರು ಶನಿವಾರ ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವಾ ಸಂಘ ಬೆಂಗಳೂರು ಇವರ ವತಿಯಿಂದ ಆಯೋಜಿಸಲಾಗಿದ್ದ ಸುವರ್ಣ ಮಹೋತ್ಸವ ಕಾರ್ಯಕ್ರಮ ವನ್ನು ಉದ್ಘಾಟಿಸಿ ಮಾತನಾಡಿದರು.

**ಸರ್ಕಾರದ ಯಶಸ್ವಿ ಆಡಳಿತಕ್ಕೆ ಎರಡು ವರ್ಷ :** ಸಂಘವು 50 ವರ್ಷಗಳ ಮೈಲಿಗಲ್ಲನ್ನು ಸಾಧಿಸಿದ್ದು, ಇದಕ್ಕಾಗಿ ಶ್ರಮಿಸಿದ ಸಂಘದ ಎಲ್ಲ ಪದಾಧಿಕಾರಿಗಳಿಗೆ ಅಭಿನಂದನೆಗಳು. ನಿಮ್ಮೆಲ್ಲರ ಸಹಕಾರದಿಂದ ನಾನು ಆರ್ಥಿಕ ಇಲಾಖೆಯ ಜವಾಬ್ದಾರಿಯನ್ನು ದೀರ್ಘ ಕಾಲದವರೆಗೆ ನಿಭಾಯಿಸಲು ಸಾಧ್ಯವಾಯಿತು. ನಾನು ಹಣಕಾಸು ಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ ಹಾಗೂ ಮುಖ್ಯಮಂತ್ರಿಯಾಗಿ ಹಣಕಾಸು ಇಲಾಖೆಯ ಕಾರ್ಯಭಾರವನ್ನು ನಿರ್ವಹಿಸಿದ್ದೇನೆ. ಈಗ ಸರ್ಕಾರದ ಯಶಸ್ವಿ ಆಡಳಿತಕ್ಕೆ ಎರಡು ವರ್ಷ ಪೂರೈಸಿದ್ದು, ಮೇ 20 ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಸಮಾವೇಶವನ್ನು ಏರ್ಪಡಿಸಲಾಗಿದೆ ಎಂದರು.

**ತೆರಿಗೆ ಸಂಗ್ರಹಣೆಯಲ್ಲಿ ಗುರಿ ಸಾಧನೆ ಆಗಬೇಕು :** ತೆರಿಗೆ ಸಂಗ್ರಹಣೆಯಲ್ಲಿ ವಾಣಿಜ್ಯ ತೆರಿಗೆ ಅಧಿಕಾರಿಗಳ ಪ್ರಮುಖ ಪಾತ್ರ ವಹಿಸುತ್ತಿದ್ದು, ಇದಕ್ಕಾಗಿ ಎಲ್ಲ ಅಧಿಕಾರಿಗಳಿಗೆ ಅಭಿನಂದನೆಗಳು. ಜವಾಬ್ದಾರಿಯುತ ಅಧಿಕಾರಿಗಳಿಂದ ಉತ್ತಮ ತೆರಿಗೆ ಸಂಗ್ರಹಣೆಯಾಗುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯಿಂದ ಹೆಚ್ಚಿನ ಮೊತ್ತದ ತೆರಿಗೆ ಸಂಗ್ರಹಣೆ ಸಾಧ್ಯವಾಗುತ್ತದೆ. ಕಳೆದ ವರ್ಷ ತೆರಿಗೆ ಸಂಗ್ರಹಣೆಗೆ 1,03,000 ಕೋಟಿಗಳ ಗುರಿನಿಗದಿಪಡಿಸಲಾಗಿದ್ದು, ಹೆಚ್ಚುವರಿ 17000 ಕೋಟಿಗಳ ತೆರಿಗೆ ಸಂಗ್ರಹಣೆಯನ್ನು ಸಾಧಿಸಲಾಗಿತ್ತು. ಈ ವರ್ಷ ತೆರಿಗೆ ಸಂಗ್ರಹಣೆಗೆ 1,20,000 ಕೋಟಿಗಳ ಗುರಿಯನ್ನು ನೀಡಲಾಗಿದ್ದು, ಅಧಿಕಾರಿಗಳು ಗುರಿಮೀರಿ ಸಾಧನೆ ಮಾಡಬೇಕಿದೆ. ಈ ವರ್ಷ 409000 ಕೋಟಿ ರೂ. ಗಳ ಬಜೆಟ್ ಮಂಡಿಸಲಾಗಿದ್ದು, ಇದರಲ್ಲಿ ಗ್ಯಾರಂಟಿ ಯೋಜನೆಗಳಿಗೆ 50,018 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಈವರೆಗೆ 90,000 ಕೋಟಿ ರೂ.ಗಳನ್ನು ಗ್ಯಾರಂಟಿಯೋಜನೆಗಳಿಗೆ ವೆಚ್ಚ ಮಾಡಲಾಗಿದೆ. ಗ್ಯಾರಂಟಿಗಳಿಗೆ ಹಣ ಪೂರೈಸಲಾಗದೇ ರಾಜ್ಯ ಆರ್ಥಿಕ ದಿವಾಳಿಯಾಗುತ್ತದೆ ಎಂದು ವಿರೋಧಪಕ್ಷದವರು ಟೀಕಿಸಿದ್ದರು. ಸರ್ಕಾರದ ಈ ಯಶಸ್ಸಿಗೆ ಇಲಾಖೆಯ ಅಧಿಕಾರಿಗಳ ಶ್ರಮ ಅಡಗಿದೆ ಎಂದರು.

**ತೆರಿಗೆ ಪ್ರಕ್ರಿಯೆಯಲ್ಲಿ ಸುಧಾರಣೆ ತರಲು ಸರ್ಕಾರ ಬದ್ಧ :** ನಾನು ಹಣಕಾಸಿನ ಮಂತ್ರಿಯಾಗಿದ್ದರೂ ಸಹ ತೆರಿಗೆ ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಅನಗತ್ಯ ಮದ್ಯಪ್ರವೇಶ ಮಾಡಲು ಬಯಸುವುದಿಲ್ಲ. ಆದರೆ ಅಧಿಕಾರಿಗಳು ಇಲಾಖೆಗೆ ನೀಡಿರುವ ತೆರಿಗೆ ಸಂಗ್ರಹಣೆಯ ಗುರಿಯನ್ನು ಸಾಧಿಸಲು ಪ್ರಯತ್ನಿಸಬೇಕು. ಬೆಂಗಳೂರಿನಲ್ಲಿ ತೆರಿಗೆ ಸೋರಿಕೆ ಹೆಚ್ಚಿನ ಮಟ್ಟದಲ್ಲಿದೆ. ಕರ್ನಾಟಕ ತೆರಿಗೆ ಸಂಗ್ರಹಣೆಯಲ್ಲಿ ಮುಂಚೂಣಿಯಲ್ಲಿದೆ. ತೆರಿಗೆ ಪಾವತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಸುಧಾರಣೆಗಳನ್ನು ತರಲು ಸರ್ಕಾರ ಬದ್ಧವಾಗಿದೆ. ತೆರಿಗೆಅಧಿಕಾರಿಗಳಸಂಘದಬೇಡಿಕೆಗಳನ್ನುಸರ್ಕಾರಪರಿಶೀಲಿಸಲಾಗುವುದು. ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳಿಗೆ ಸರ್ಕಾರ ಎಂದಿಗೂ ಸ್ಪಂದಿಸುತ್ತದೆ. ಅಂತೆಯೇ ಕರ್ತವ್ಯಲೋಪ ಎಸಗುವ ಅಧಿಕಾರಿ ನೌಕರರ ಮೇಲೆ ಶಿಸ್ತಿನ ಕ್ರಮವನ್ನೂ ಸರ್ಕಾರ ತೆಗೆದುಕೊಳ್ಳುತ್ತದೆ ಎಂದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಲೋಕೋಪಕಾರವೇ ಬದುಕಿನ ಸಾರ್ಥಕತೆ ಉಮರನ ಒಸಗೆ - ಹೂತೋಟದ ತಂಗಾಳಿ


**ಅಲ್ಲಿ ಮರದಡಿಯಲ್ಲಿ ನಲ್ಗಾವ್ಯವೊಂದಿರಲು**
**ರೊಟ್ಟಿಯೊಂದಿನಿಸೊಂದು ಕುಡಿಕೆಯಲಿ ಮಧುವು,**
**ಮೇಣ್,ಮುಗುದೆ ನೀನೆನ್ನ ಬಳಿ ಕುಳಿತು ಪಾಡಲಹ !**
**ಕಾಡಾದೊಡೇನದುವೆ ಸಗ್ಗ ಸುಖವೆನಗೆ.**

ಯಾರನ್ನೇ ಆಗಲಿ ಥಟ್ಟನೇ ತಮ್ಮೆಡೆಗೆ ಸೆಳೆದು ಮೋಡಿ ಮಾಡುವ ಮೋಹಕ ಗುಣವಿರುವ ಕವಿತೆ ಇದು. ಲೌಕಿಕ ಬದುಕಿನ ಸುಖದ, ಸಾರ್ಥಕ ಕ್ಷಣಗಳ ಅಂತಿಮ ಬಿಂದು ಯಾವುದು ಎನ್ನುವುದರ ಕುರಿತಾದ ಚರ್ಚೆ ತುಂಬ ಪ್ರಾಚೀನವಾದುದು. ಲೌಕಿಕದ ಮೂಲಕವೇ ಅಲೌಕಿಕ ಎನ್ನುವುದನ್ನು ಭಾರತೀಯ ಧರ್ಮಗಳು ಹೇಳುತ್ತವೆ. ವಿಶ್ವದ ಇತರ ಧರ್ಮಗಳ ದಾರ್ಶನಿಕರೂ ಬಹುತೇಕ ಇದನ್ನೇ ಪ್ರತಿಪಾದಿಸುತ್ತಾರೆ. ಇರುವ ಸೀಮಿತ ಅವಧಿಯ ಈ ಬದುಕನ್ನು ಸಾರ್ಥಕಪಡಿಸಿಕೊಳ್ಳುವುದು ಹೇಗೆ ಎನ್ನುವುದಕ್ಕೆ ಸಾವಿರಾರು ಗ್ರಂಥಗಳು ಉತ್ತರ ನೀಡಿವೆ. ಪುರಾಣ ಕಾಲದಿಂದ ಇಂದಿನವರೆಗೆ ಸಾವಿರಾರು ವ್ಯಕ್ತಿತ್ವಗಳು ನಮ್ಮೆದುರು ಮೈತಳೆದು ನಿಂತಿವೆ. ಅಂತಹ ಉತ್ತರಗಳಲ್ಲಿ ಚೈತನ್ಯದಾಯಕವಾದ, ಜೀವನೋತ್ಸಾಹದ, ಮುಂಜಾನೆಯ ಮಂಜಲ್ಲಿ ತೋಯ್ದು ಅರಳಿದ ಗುಲಾಬಿಯಂತಹ ಉತ್ತರ ಈ ಮೇಲಿನ ಪದ್ಯ.

ಧಾರ್ಮಿಕರು ಪರಮಾತ್ಮನನ್ನು ಸೇರುವುದೇ ಈ ಜನ್ಮದ ಉದ್ದೇಶ ಎನ್ನುತ್ತಾರೆ. ಜಗತ್ತಿನ ಎಲ್ಲ ತತ್ವಜ್ಞಾನಿಗಳೂ, ದಾರ್ಶನಿಕರೂ, ಮಹೋನ್ನತ ವ್ಯಕ್ತಿಗಳೂ ಲೋಕೋಪಕಾರವೇ ಬದುಕಿನ ಸಾರ್ಥಕತೆ ಎನ್ನುತ್ತಾರೆ. ಇದೆಲ್ಲವೂ ಸತ್ಯವೇ. ಆದರೆ ಇದೆಲ್ಲದರ ಜೊತೆಗೆ ಇರುವವರೆಗೆ ನಮ್ಮ ಬದುಕು ಹೇಗಿರಬೇಕು ಎಂಬುದನ್ನು ಅನೇಕರು ಅನೇಕ ಬಗೆಯಲ್ಲಿ ವಿವರಿಸಿದ್ದಾರೆ. ಅಂತಹ ಒಂದು ಸುಂದರ ಹೂತೋಟದ ತಂಗಾಳಿಯೇ ಈ ಉಮರನ ಒಸಗೆ.

ಉಮರ್ ಖಯ್ಯಾಮನು ಪರ್ಶಿಯಾ (ಈಗಿನ ಇರಾನ್) ದೇಶದ ಕವಿ. 'ಘಿಯಾತ್-ಉದ್ ದೀನ್-ಫಾತ್ ಉಮರ್ ಬಿನ್ ಇಬ್ರಾಹಿಂ ಅಲ್ ಖಯ್ಯಾಮಿ' ಈತನ ಪೂರ್ಣ ಹೆಸರು. 'ಉಮರ್ ಖಯ್ಯಾಮ್' ಎನ್ನುವುದು ಜನಪ್ರಿಯ ಹೆಸರು. ಖಯ್ಯಾಮ್ ಎನ್ನುವುದು ಮನೆತನದ ಹೆಸರು. ಖಯ್ಯಾಮ್ ಎಂದರೆ ಗುಡಾರಗಳನ್ನು ತಯಾರಿಸುವವರು ಎಂದು ಅರ್ಥ. ಪರ್ಶಿಯಾ ದೇಶದ ಖೊರಾಸಾನ್ (ಅಂದರೆ ಸೂರ್ಯದೇಶ) ಪ್ರಾಂತ್ಯದ ನೀಷಾಪೂರ್ ಎಂಬ ಪಟ್ಟಣ ಈತನ ಹುಟ್ಟೂರು. ಕ್ರಿ.ಶ – 1048 ಮೇ 18 ಈತನ ಜನ್ಮದಿನ. ಉಮರ ಖಯ್ಯಾಮನದು ಉಪಾಧ್ಯಾಯ ವೃತ್ತಿ. ಈತನು ಗಣಿತ, ಖಗೋಳ ಶಾಸ್ತ್ರ, ಜ್ಯೋತಿಷ್ಯದಲ್ಲಿ ಪರಿಣಿತನಾಗಿದ್ದನು. ಬೀಜಗಣಿತಕ್ಕೆ ಸಂಬಂಧಿಸಿದ ಗ್ರಂಥವೊಂದನ್ನು ಬರೆದಿದ್ದಾನೆ. ಬೀಜಗಣಿತದ ಸಮಸ್ಯೆಗಳನ್ನು ಕ್ಷೇತ್ರಗಣಿತದ ಸಹಾಯದಿಂದ ಬಿಡಿಸಬಹುದು ಎಂದು ತೋರಿಸಿಕೊಟ್ಟಿದ್ದಾನೆ. Treatise on Demonstration of Problems of Algebra ಇದು ಖಯ್ಯಾಮ್ ಬರೆದಿರುವ ಗಣಿತದ ಗ್ರಂಥ. ಈತನು ಭಾರತದ ಗಣಿತವನ್ನೂ, ಯೂಕ್ಲಿಡ್ಡನ ಗಣಿತದ ಸಿದ್ಧಾಂತಗಳನ್ನೂ ಅರಗಿಸಿಕೊಂಡಿದ್ದನು ಎನ್ನಲಾಗಿದೆ. ಅಂಕಗಣಿತ ಮತ್ತು ಸಂಗೀತದ ಕುರಿತಾಗಿಯೂ ಗ್ರಂಥಗಳನ್ನು ಬರೆದಿದ್ದನು ಎನ್ನುತ್ತಾರೆ. ಈತನು ಈಗಿನ ಉಜ್ಬೇಕಿಸ್ತಾನದ ಸಮರ ಖಂಡ ನಗರದಲ್ಲಿ ವಿದ್ಯಾಭ್ಯಾಸ ಪಡೆದು ತನ್ನ ಬೀಜಗಣಿತದ ಗ್ರಂಥವನ್ನು ಅಲ್ಲಿಯೇ ಬರೆದನು ಎಂದು ಹೇಳಲಾಗುತ್ತದೆ. ಈತನು ತನ್ನ ದೇಶದ ಪಂಚಾಗ ಪದ್ಧತಿಯನ್ನು ಪರಿಷ್ಕರಿಸಿ ಕೊಟ್ಟನು.

ಉಮರನು ವಿದ್ಯೆಕಲಿಯುತ್ತಿದ್ದಾಗ ಈತನಿಗೆ ಇಬ್ಬರು ಆತ್ಮೀಯ ಗೆಳೆಯರಿದ್ದರು. ಅದರಲ್ಲೊಬ್ಬನು ರಾಜನ ಬಳಿ ಮುಖ್ಯಮಂತ್ರಿಯಾದನು. ಆತನು ಉಮರನನ್ನು ಅಹ್ವಾನಿಸಿ ಒಳ್ಳೆಯ ಪದವಿ, ಬಿರುದು, ಸಂಪತ್ತು ನಗರವಾಸವನ್ನು ಕೊಡುವೆ ಎಂದಾಗ ಉಮರನು ಅದನ್ನೆಲ್ಲ ನಿರಾಕರಿಸುತ್ತಾನೆ. 'ನಿನ್ನ ಆದಿಪತ್ಯದ ಒಂದು ಸುಂದರ ಪ್ರಶಾಂತ ಹಳ್ಳಿಗಾಡಿನಲ್ಲಿ ಜೀವಿಸುತ್ತಾ ಜ್ಞಾನದ ಸಂಪತ್ತನ್ನು ಹರಡುತ್ತಾ ನಿನ್ನ ಶ್ರೇಯಸ್ಸನ್ನು ಬಯಸುತ್ತೇನೆ. ಇದಕ್ಕೆ ನೀನು ಸಹಕರಿಸಿದರೆ ಇದೇ ನೀನು ನನಗೆ ಮಾಡಬಹುದಾದ ಮಹದುಪಕಾರ' ಎನ್ನುತ್ತಾನೆ. ಇದಕ್ಕೆ ಒಪ್ಪಿದ ಗೆಳೆಯನು ಉಮರನ ಜೀವನಕ್ಕೆ ಸಾಕಾಗುವಷ್ಟು ವರ್ಷಾಸನವನ್ನು ನೀಡಲು ವ್ಯವಸ್ಥೆ ಮಾಡುತ್ತಾನೆ. ಉಮರನು ನಂತರ ಉಪಾಧ್ಯಾಯನಾಗಿದ್ದುಕೊಂಡು ಗ್ರಂಥ ವ್ಯಾಸಂಗ, ರಚನೆ, ತತ್ವ ವಿಚಾರಕ್ಕೆ ತನ್ನ ಜೀವನವನ್ನು ಮುಡಿಪಾಗಿಟ್ಟನು.






ಉಮರನ ಗಣಿತ, ಖಗೋಳ ಶಾಸ್ತ್ರ, ಸಂಗೀತ ಜ್ಞಾನ ಇವೆಲ್ಲ ಅತ್ಯುನ್ನತವಾದವುಗಳು. ಆದರೆ ಇವೆಲ್ಲವನ್ನೂ ಮೀರಿಸಿದ್ದು ಈತನ ಕವಿತಾ ಶಕ್ತಿ. 'ರುಬಾಯತ್'ಗಳು ಎಂಬ ಹೆಸರಿನ ಚೌಪದಿಗಳನ್ನು ಈತನು ರಚಿಸಿದನು. ರುಬಾಯಿ ಎನ್ನುವುದು ಛಂದಸ್ಸಿನ ಹೆಸರೂ ಹೌದು ಎಂದು ಹೇಳುತ್ತಾರೆ. ಇವುಗಳಲ್ಲಿ ಒಂದು, ಎರೆಡು, ನಾಲ್ಕನೆಯ ಸಾಲುಗಳಲ್ಲಿ ಅಂತ್ಯ ಪ್ರಾಸ ಇರುತ್ತದೆ. ನಾಲ್ಕು ಸಾಲಿನ ಈ ರುಬಾಯತ್ ಗಳಲ್ಲಿ ಮೂರನೆಯ ಸಾಲಿಗೆ ಪ್ರಾಸದ ನಿರ್ಬಂಧ ಇರುವುದಿಲ್ಲ. ಈತನ ರುಬಾಯತ್ ಗಳಲ್ಲಿ ಅಂದಾಜು ಎರಡು ನೂರಾ ಐವತ್ತು ದೊರೆತಿವೆ. ಆದರೆ ವಾಸ್ತವವಾಗಿ ಏಳು ನೂರಾ ಐವತ್ತು ಕ್ಕಿಂತ ಹೆಚ್ಚು ಇರಬಹುದು ಎಂದು ವಿದ್ವಾಂಸರು ಹೇಳುತ್ತಾರೆ.



ಬಿ.ಎಂ.ರಾಜಶೇಖರ, ಶಿಕ್ಷಕರು

M:9900705323

Scan For Digital Colourful

HAMPI TIMES E-paper

ಉಪಾಧ್ಯಾಯನಾಗಿದ್ದ ಈತನು ತನ್ನ ವಿದ್ಯಾರ್ಥಿಗಳೊಂದಿಗೆ ಕಠಿಣವಾಗಿ ನಡೆದುಕೊಳ್ಳುತ್ತಿದ್ದನಂತೆ. ಅದಕ್ಕಾಗಿ ಪಾಠಗಳೆಲ್ಲ ಮುಗಿದ ನಂತರ ಸಂಜೆಯ ವೇಳೆ ಒಂದೆರಡು ರುಬಾಯತ್‌ಗಳನ್ನು ಹೇಳಿ ವಿದ್ಯಾರ್ಥಿಗಳನ್ನು ರಂಜಿಸಿ ಬೀಳ್ಕೊಡುತ್ತಿದ್ದನಂತೆ. ಅವುಗಳೇ ಈ ಕವನಗಳು. ಈ ರುಬಾಯತ್‌ಗಳು ಎಷ್ಟು ಜನಪ್ರಿಯವಾದವೆಂದರೆ ಇವುಗಳು ಇಂಗ್ಲಿಷ್, ಫ್ರೆಂಚ್, ಜರ್ಮನ್, ರಷಿಯನ್, ಕನ್ನಡ, ಸಂಸ್ಕೃತ, ಮರಾಠಿ, ತೆಲುಗು ಇನ್ನೂ ಅನೇಕ ಭಾಷೆಗಳಿಗೆ ಅನುವಾದಗೊಂಡವು. ಉಮರನ ರುಬಾಯತ್‌ಗಳು ಅತಿ ಹೆಚ್ಚು ಜನಪ್ರಿಯವಾದದ್ದು ಮಾತ್ರವಲ್ಲ ಹೆಚ್ಚು ವಿಮರ್ಶೆಗಳಿಗೂ ವ್ಯಾಖ್ಯಾನಗಳಿಗೂ ಒಳಪಟ್ಟವು. ಹಾಗಾಗಿ ಬರೀ ಜನಪ್ರಿಯವಷ್ಟೇ ಅಲ್ಲದೆ ಶ್ರೇಷ್ಠ ಕವಿತೆಗಳಿಂದು ಪಂಡಿತರಿಂದ ಮೆಚ್ಚುಗೆ ಗಳಿಸಿವೆ.

ಇವುಗಳನ್ನು ಮೊದಲು ಪಾರಸೀ ಭಾಷೆಯಿಂದ ಇಂಗ್ಲಿಷ್ ಭಾಷೆಗೆ ಅನುವಾದಿಸಿದವನು ಫಿಟ್ಸ್ ಜೆರಲ್ಡ್ (Edward Fitzerald) ಎಂಬ ಇಂಗ್ಲಿಷ್ ಲೇಖಕ. (1809–1883). ಈತನು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮುಗಿಸಿ ಯಾವ ಉದ್ಯೋಗಕ್ಕೂ ಹೋಗಲಿಲ್ಲ. ಅದಕ್ಕೆ ಬದಲಾಗಿ ಪ್ರಶಾಂತ ವಾತಾವರಣದಲ್ಲಿ ಹೂತೋಟದಲ್ಲಿ ವಾಸಿಸುತ್ತಾ, ಏಕಾಂಗಿಯಾಗಿ ಕಾವ್ಯ ವ್ಯಾಸಂಗ ಮಾಡುತ್ತಾ, ಗಂಭೀರ ವಿಚಾರಸರಣಿಯಲ್ಲಿ ಮಗ್ನನಾಗಿರಬೇಕು. ಗದ್ದೆ, ತೋಟ, ಕಾಡುಗಳಲ್ಲಿ ಸಂಚಾರ ಮಾಡುವುದು, ಹಳ್ಳಿಯ ಜನರೊಂದಿಗೆ ಮಾತನಾಡುವುದು, ಸಮುದ್ರದಲ್ಲಿ ಒಬ್ಬನೇ ದೋಣಿ ನಡೆಸಿಕೊಂಡು ಹೋಗುವುದು, ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸುತ್ತಾ ಮೈಮರೆತು ಕುಳಿತುಕೊಳ್ಳುವುದು, ಗುಣವಂತರೂ, ಸರಸಿಗಳೂ ಆದ ಕೆಲವೇ ಕೆಲವು ಸ್ನೇಹಿತರ ಸಂಗ, ಸದ್ಗ್ರಂಥಗಳ ಓದು, ಬರೆಹ ಇಷ್ಟರಲ್ಲಿ ಇರಬೇಕು ಹಾಗೂ ಇದೇ ಬದುಕುವ ರೀತಿ ಎಂದು ಭಾವಿಸಿದ್ದನು. ಅಲ್ಲದೇ ಹಾಗೆಯೇ ಬದುಕಿದನು ಕೂಡಾ. ಬಹುತೇಕ ಉಮರನ ಕವಿತೆಗಳಂತೆ, ಉಮರನಂತೆ ಮನೋಭಾವ ಹೊಂದಿದ್ದ ವ್ಯಕ್ತಿಯಾಗಿದ್ದನು. ರುಬಾಯತ್‌ಗಳನ್ನು ಅನುವಾದಿಸಲು ತಕ್ಕ ವ್ಯಕ್ತಿಯಾಗಿದ್ದನು. ಮೃದು ಹೃದಯಿಯೂ, ಕಾವ್ಯ ರಸಜ್ಞನೂ ಆಗಿದ್ದ ಈತನು ಕ್ರಿ.ಶ–1859ರಲ್ಲಿ ರುಬಾಯತ್ ಎಂಬ ಕವಿತಾ ಸಂಕಲನವನ್ನು ಇಂಗ್ಲಿಷ್‌ಗೆ ಅನುವಾದಿಸಿ ಪ್ರಕಟಿಸಿದನು.

ಈ ಗ್ರಂಥವು ಮೊದಲು ಜನರ ಕಣ್ಣಿಗೆ ಬೀಳಲಿಲ್ಲ. ಒಂದು ವರ್ಷದ ನಂತರ ಇದರ ಜನಪ್ರಿಯತೆ ಹೆಚ್ಚಿ 1859 ರಿಂದ 1879ರ ವೇಳೆಗೆ ನಾಲ್ಕು ಬಾರಿ ಮುದ್ರಣವಾಯಿತು. ಮುಂದಿನ ದಿನಗಳಲ್ಲಿ ರುಬಯ್ಯಾತ್ ಬರೆದ ಉಮರ್ ಖಯ್ಯಾಮನ ಹೆಸರಿನಲ್ಲಿ ಇಂಗ್ಲೆಂಡ್ ಅಮೆರಿಕಾಗಳಲ್ಲಿ ಕ್ಲಬ್‌ಗಳು ಆರಂಭವಾದವು. ಈತನ ಕುರಿತು ಡಾಕ್ಯುಮೆಂಟರಿಗಳೂ, ಸಿನಿಮಾಗಳೂ ಮೂಡಿ ಬಂದವು.

ಫಿಟ್ಸ ಜೆರಲ್ಡನ ಈ ಇಂಗ್ಲಿಷ್ ಮೂಲದ ಕೃತಿಯನ್ನು ಕನ್ನಡಕ್ಕೆ ತಂದವರು ಋಷಿ ಸದೃಶರಾದ ಶ್ರೀಮಾನ್ ಡಿ.ವಿ.ಜಿ ಯವರು (1887 – 1975). 'ಉಮರನ ಒಸಗೆ' ಎಂಬ ಹೆಸರಿನ ಈ ಕೃತಿಯನ್ನು ಕ್ರಿ.ಶ – 1930 ರಲ್ಲಿ ಮೊದಲ ಬಾರಿಗೆ ಮುದ್ರಿಸಿ ಹೊರ ತಂದರು. ಅಲ್ಲಿಂದ ಇಲ್ಲಿಯವರೆಗೆ ಇದು ಆರು ಬಾರಿ ಪುನರ್ಮುದ್ರಣವಾಗಿದೆ. ಉಮರ, ಫಿಟ್ಸ್ ಜೆರಲ್ಡ್ ಹೇಗೆ ಭಗವತ್ ಚಿಂತನೆಯಲ್ಲಿ, ಸರಳವಾಗಿ ಬಾಳಿದರೋ ಹಾಗೆಯೇ ಡಿ.ವಿ.ಜಿ ಯವರೂ ಋಷಿಗಳಂತೆ ಬದುಕಿದವರು. ಈ ಕನ್ನಡದ ಕೃತಿಯನ್ನು ಅನುವಾದ ಎನ್ನಬಾರದು ಇದನ್ನು ಪುನರ್‌ಸೃಷ್ಟಿ ಎನ್ನಬೇಕು. ಇದನ್ನು ಡಿವಿಜಿ ಯವರು ಶಬ್ದಶ: ಅನುವಾದ ಮಾಡಿಲ್ಲ, ಬದಲಾಗಿ ಉಮರನ ಭಾವಲಹರಿಯನ್ನು ಅನುಭವಿಸಿ ಕಾವ್ಯದಲ್ಲಿ ಹಿಡಿದಿಟ್ಟಿದ್ದಾರೆ. ಇದು ಕಾವ್ಯರಸಾನುಭೂತಿಯ ಮೇರು ಕೃತಿಯಾಗಿದೆ.

ಡಿ.ವಿ.ಜಿ ಯವರು ತಾವೇಕೆ ಈ ಕೃತಿಯನ್ನು ಅನುವಾದಿಸಿದೆ ಎಂಬುದನ್ನು ಚೌಪದಿಯಲ್ಲೇ ಹೇಳಿದ್ದಾರೆ.

**ಪಾರಸಿಕ ಹೃದಯ ಸಾಗರದಾಣಿಮುತ್ತುಗಳನ್**
**ಉಮರನಿಳಿದೆತ್ತಿ ತರಲ್, ಅದರಿಂದೆ ಸರವನ್**
**ಫಿಟ್ಸ್ ಜೆರಲ್ಡನ್ ಕೋದನ್ ಆಂಗ್ಲರೇಷ್ಮೆಯಿನ್, ಅದರ**
**ಮಾಟವಿದು ಕನ್ನಡದ ನುಡಿವೆಣ್ಣೆಗೊಸಗೆ.**

ಕಾವ್ಯ ಹೃದಯಿ ಉಮರನ ರುಬಾಯತ್‌ಗಳೆಂಬ ಮುತ್ತುಗಳನ್ನು ರೇಷ್ಮೆಯಂತಹ ನಯವಾದ ಆಂಗ್ಲಭಾಷೆಯಲ್ಲಿ ಹಾರವಾಗಿ ಫಿಟ್ಸ್ ಜೆರಲ್ಡ್ ಹೆಣೆದಿದ್ದಾನೆ. ಅದರ ಸುಂದರ ರೂಪವಾಗಿ ತಾನು ಇದನ್ನು ಕನ್ನಡದಲ್ಲಿ ಹೇಳಿದ್ದೇನೆ ಎನ್ನುತ್ತಾರೆ. ಇದರಿಂದ ಉಮರನೂ, ಫಿಟ್ಸ್‌ಜೆರಲ್ಡನೂ, ರುಬಾಯತ್‌ಗಳೂ ಡಿ.ವಿ.ಜಿ ಯವರ ಮೇಲೆ ಬೀರಿರುವ ಪ್ರಭಾವವನ್ನು ಊಹಿಸಬಹುದು.

ಉಮರ್ ಖಯ್ಯಾಮ್ ಎಂದೊಡನೆ ಎಲ್ಲರ ಮನದಲ್ಲಿ ಒಂದು ಚಿತ್ರ ಮೂಡುತ್ತದೆ. ಮದಿರೆ, ಮಾನಿನಿ, ಗುಲಾಬಿ, ಮಾವು ಇತ್ಯಾದಿಗಳ ಸಂಗದಲ್ಲಿ ಮೈಮರೆತಿರುವ, ಇವುಗಳಿಂದ ಲೋಕದ ಚಿಂತೆ, ದು:ಖಗಳಿಂದ ದೂರವಾಗಿರುವ ಉಪಾಯ ಕಂಡುಕೊಂಡಿರುವ ವ್ಯಕ್ತಿಯದು ಎಂದು. ಇದಕ್ಕೆ ಇಂಬು ಕೊಡುವ ಅನೇಕ ರುಬಾಯತ್‌ಗಳನ್ನು ಉಮರ್ ರಚಿಸಿದ್ದಾನೆ.

**ಮಾಂದಳಿರ ಸವಿಯುಂಡು ಮೈಮರೆತ ಬುಲ್ಬುಲನು**
**ಚೆಲು ಗುಲಾಬಿಯ ನನೆಯನರಳಿಸಲ್ಕೆಂದು,**
**ನಗುನಗುತೆ ಕುಣಿದಾಡಿ ಪಾಡುತಿಹನ್, ಆಲೈಸು:**
**ಕಳ್ಳು, ಚೆಂಗಳ್ಳು, ಸವಿಗಳ್ಳು ಕಳ್ಳೆನುತೆ.**

ಪದ್ಯ – 06

**ಬಾ ತುಂಬು ಬಟ್ಟಲನು, ಮಧುಮಾಸದಗ್ನಿಯಲಿ**
**ಚಿಂತೆ ಬೆಸನೆಂಬ ಚಳಿಬೊಂತೆಯನು ಬಿಸುಡು**
**ನಮ್ಮಾಯುಸಿನ ಪಕ್ಕಿ ಪಾರ್ವ ದೂರವೆ ಕಿರಿದು**
**ಅದು ರೆಕ್ಕೆಯೆತ್ತಿಹುದು ನೋಡು, ಮನಮಾಡು**

ಪದ್ಯ – 07

**ಈ ಗುಲಾಬಿಯ ಕೆಂಚದೆತ್ತಣದೋ ! ಇದರ ಬೇ**
**ರಿಂಟಿತೇಂ ಚೆಲುವೆಯೊಬ್ಬಳ ರಕುತ ಕಣವ**
**ಈ ನದಿಯನಪ್ಪಿರುವ ಪಸುರೋ ! ಪಿಂತಿತ್ತಳಿದ**
**ಬಿರಯಿಯೊರ್ವನ ತಲೆಯ ಪಾಗಿದರ ಬೇರೇಂ.**

ಪದ್ಯ – 16

**ಹಾ ! ಪ್ರಿಯಳೆ ಬಾ : ಇಂದಿನಿಂ ಹಿಂದಿನಳಲುಗಳ**
**ಮುಂದಿನಳುಕುಗಳ ತೊಲಗಿಸುವ ಬಟ್ಟಲನು**
**ತುಂಬಿ ನೀಡೆನಗೆ : ನಾಳೆಯೆಂಬೆಯೋ? ನಾಳೆ**
**ಸೇರುವೆನು ನೂರ್ಕೋಟಿ ನಿನ್ನೆಗಳ ಜೊತೆಗೆ**

ಪದ್ಯ – 19

**ಸಖರೆ ನೀಂ ಬಹು ದಿನದ ಪಿಂತೆನ್ನ ಮನೆಯೊಳಗೆ**
**ಪೊಸ ಮದುವೆಯೌತಣಕೆ ಬಂದಿದದ್ದಿರಲ್ತೆ ?**
**ಒಣ ಬಂಜೆ ತರ್ಕ ವನಿತೆಯನಂದು ನಾಂ ತೊರೆದು**
**ದ್ರಾಕ್ಷೆಯೆಂಬಳ ಸುತೆಯ ಮೆದುಗೈಯ ಪಿಡಿದೆಂ.**

ಪದ್ಯ – 41

**ದ್ರಾಕ್ಷಿಯೇಂ? ದೇವನೇ ಬೆಳೆಸಿರುವ ಬೆಳೆಯಲ್ತೆ?**
**ತಿರಿಚು ಬಳ್ಳಿಯ ಪಾಶವೆಂದು ಶಪಿಸುವುದೆ?**
**ದೈವ ಪ್ರಸಾದವದು : ಭುಜಿಸುವುದೆ ಕರ್ತವ್ಯ.**
**ಅದು ವರ್ಜ್ಯವೆಂಬೊಡದನಿಲ್ಲಿ ತಂದವನಾರ್.**

ಪದ್ಯ – 61

ಹೀಗೆಯೇ ಸುಂದರವೂ, ಮೋಹಕವೂ ಆದ ಅನೇಕ ಕವಿತೆಗಳು ಇಲ್ಲಿವೆ. ಸಹಜವಾಗಿಯೇ ಇವುಗಳು ಮದ್ಯಪ್ರಿಯನೊಬ್ಬನ ಮಾತುಗಳಂತೆ ತೋರುತ್ತವೆ. ಆದರೆ ಉಮರನು ವಿನೋದ ಪ್ರಿಯನಾಗಿದ್ದ ಹಾಗೂ ಬದುಕಿನ ಸಂತೋಷವನ್ನು ಅನುಭವಿಸಬೇಕೆನ್ನುವ ರಸಿಕನಾಗಿದ್ದನು. ಬದಲಾಗಿ ಲಜ್ಜಾಹೀನನಾದ ಇಂದ್ರಿಯಾಸಕ್ತನಾಗಿರಲಿಲ್ಲ. ಕವಿಯೂ, ಸರಸಿಯೂ, ಗ್ರಂಥಾಭ್ಯಾಸಿಯೂ ಆಗಿದ್ದ ಉಮರನು ಒಬ್ಬ ಶ್ರದ್ಧಾವಂತ ಧಾರ್ಮಿಕನೂ ಆಗಿದ್ದನು. ಈತನನ್ನು ಸೂಫೀ ಪಂಥದವನೆಂದೂ ಕೆಲವರು ಹೇಳುತ್ತಾರೆ. ಯಾವುದೇ ಕವಿಯ ಕಾವ್ಯವನ್ನು ನಾವು ನೇರವಾಗಿ ಅಕ್ಷರಶ: ತೆಗೆದುಕೊಳ್ಳಬಾರದು, ನಿಘಂಟಿನ ಅರ್ಥಗಳನ್ನು ಹುಡುಕಬಾರದು. ಎಲ್ಲ ಕವಿಗಳಿಗೂ ಇದು ಅನ್ವಯಿಸುತ್ತದೆ. ಉಮರನ ಕಾವ್ಯದಲ್ಲಿ ಧ್ವನಿತಾರ್ಥವೇ ಮುಖ್ಯ. ಅದರಲ್ಲೂ ಧಾರ್ಮಿಕ ಸಂಗತಿಗಳನ್ನು ಗೂಡಾರ್ಥದಲ್ಲಿ ಹೇಳಿರುವುದೇ ಹೆಚ್ಚು.

ಉಮರನು ಮುಖ್ಯವಾಗಿ ಬದುಕಿನ ಅರ್ಥವನ್ನು, ಕ್ಷಣಿಕ ಆಯಸ್ಸಿನ ಮಧ್ಯೆ ನಾವು ಹೇಗಿರಬೇಕು, ದು:ಖದಿಂದ, ಚಿಂತೆಯಿಂದ ಮಾನವರು ಹೇಗೆ ಹೊರಬರಬೇಕೆನ್ನುವ ಕುರಿತು ಆಳವಾಗಿ ಚಿಂತಿಸಿ ಪರಿಹಾರಗಳನ್ನು ಸೂಚಿಸಲು ಯತ್ನಿಸಿದ್ದಾನೆ. ಹುಟ್ಟಿನಂತೆ ಸಾವೂ ಮಾನವರಿಗೆ ನಿಶ್ಚಿತ. ಇದು ಭಗವಂತನ ಇಚ್ಛೆ. ಇದಕ್ಕಾಗಿ ದು:ಖ ಪಡಬೇಕಾಗಿಲ್ಲ. ಆದರೆ ಸಾವು ಬರುವವರೆಗೆ ನಾವು ಇತರರಿಗೆ ಹಾನಿಯಾಗದಂತೆ, ಲೋಕೋಪಕಾರ ಮಾಡುತ್ತಾ ಧರ್ಮ ಮಾರ್ಗದಲ್ಲಿ ಸಂತೋಷ ಪಡಬೇಕು ಎನ್ನುತ್ತಾನೆ. ದೊರೆತಷ್ಟು ಸಂತೋಷದಲ್ಲಿ ಕಷ್ಟವನ್ನು ಮರೆಯಬೇಕು ಎನ್ನುತ್ತಾನೆ.


ಈ ಲೋಕದಲ್ಲಿ ಸತ್ಯ ಯಾವುದು, ಸಂತೋಷ ಯಾವುದು ತಿಳಿಯದು.ಇಂದಿನದೇಹನಾಳೆಮಣ್ಣಾಗುತ್ತದೆ.ಹಾಗಾಗುವುದರೊಳಗೆ ಈಗ ನಮಗೆ ಕಾಣುವ ಸೊಬಗನ್ನು ಸವಿಯಬೇಕು. ಅತಿಯಾದ ಚಿಂತೆಯಿಂದ ಆಗುವುದೇನೂ ಇಲ್ಲ. ಎಲ್ಲವೂ ದೇವನ ಸೃಷ್ಟಿ. ಈ ಸೃಷ್ಟಿಯಲ್ಲಿರುವ ಸುಖವನ್ನು ಅನುಭವಿಸೋಣ. ಒಂದು ಗುಲಾಬಿಯನ್ನು ನೋಡಿ ಸುಗಂಧವನ್ನು ಹೀರಿದರೂ ಬದುಕು ಸಾರ್ಥಕವೇ. ಒಗ್ಗದ ವೈರಾಗ್ಯಕ್ಕಿಂತ ಸಹಜವಾಗಿ ಲೌಕಿಕನಾಗಿರುವುದು ವಿಹಿತ. ದ್ರಾಕ್ಷಿ, ತಾಂಬೂಲ, ಮಾನಿನಿ, ಗುಲಾಬಿ ಈ ಎಲ್ಲವನ್ನೂ ಇತರರಿಗೆ ತೊಂದರೆಯಾಗದಂತೆ ಸುಖ ಪಡುವುದರಲ್ಲಿ ತಪ್ಪಿಲ್ಲ ಎನ್ನುತ್ತಾನೆ. " ದ್ರಾಕ್ಷಾರಸದ ಮಾಧುರ್ಯ, ಗುಲಾಬಿಯ ಸೌರಭ, ಚಂದ್ರನ ಶೀತಲ ಕಾಂತಿ, ಪ್ರಿಯೆಯ ಸರಾಗ ಸಾನ್ನಿಧ್ಯ ಇವಿಷ್ಟು ಲಭ್ಯವಾದರೆ ಬೇರೆ ಚಿಂತೆ ಬೇಡ, ಲೌಕಿಕನಾಗಿರು". ಇದು ಉಮರನ ಮತ. ಅಂದ ಮಾತ್ರಕ್ಕೆ ಉಮರನು ಸ್ವೇಚ್ಛಾಚಾರಿಯಲ್ಲ. ಶೃಂಗಾರಕ್ಕೂ, ಲಂಪಟತನಕ್ಕೂ ಇರುವ ತೆಳುವಾದ ಗೆರೆಯನ್ನು ತನ್ನ ಕವಿತೆಗಳಲ್ಲಿ ಹೇಳಿ ಅದನ್ನು ಮೀರದಿರಲು ತಿಳಿಸುತ್ತಾನೆ. ಏಕೆಂದರೆ ಈತನು ಒಬ್ಬ ಶ್ರದ್ಧಾವಂತ ಧಾರ್ಮಿಕ ವ್ಯಕ್ತಿಯಾಗಿದ್ದನು. ಆದರೆ ಒತ್ತಾಯದ ವಿರಕ್ತಿ ಅಪೇಕ್ಷಣೀಯವಲ್ಲ, ಸಹಜವಾಗಿರಿ ಎಂಬುದು ಈತನ ವಿಚಾರವಾಗಿದೆ. ಒಬ್ಬ ಕವಿಯೂ, ಉಪಾಧ್ಯಾಯನೂ, ತತ್ವಜ್ಞಾನಿಯೂ ಆದವನು ಯಾರನ್ನೂ ದಾರಿತಪ್ಪಿಸಲಾರ. ಆತನ ಕಾಲ, ಸಾಮಾಜಿಕ ಸ್ಥಿತಿಗತಿಗಳು, ಜನ ಜೀವನ ಇವೆಲ್ಲವುಗಳ ಹಿನ್ನೆಲೆಯಲ್ಲಿ ಉಮರನನ್ನು ನಾವು ಅರ್ಥಮಾಡಿಕೊಳ್ಳಬೇಕು. ಕವಿಯಾದವನು ಒಂದು ಜನಸಮೂಹಕ್ಕೆ ಮಾರ್ಗದರ್ಶಕನೂ ಆಗಿರುತ್ತಾನೆ. ಸರಸಿಯಾದ ಕವಿಯು ಲೋಗರಿಗೆ ಸಂತೋಷಪಡಿ ಎನ್ನುವುದು..

(ಮುಂದುವರೆಯಲಿದೆ....)

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಚೌಕಬಾರ



ಗೆಳೆಯರು ಎಲ್ಲರು ಸೇರಿ
ಆಡುವ ಚೌಕ ಬಾರ
ಮನೆಯ ಅಟ್ಟವ ಏರಿ
ಕವಡೆ ಕಾಯಿಯ ತಾರ

ಚೌಕದ ಮನೆಗಳ ಬರೆದು
ನಡುವೆ ಗುರುತನು ಕೊರೆದು
ಕವಡೆಯ ಸಂಖ್ಯೆಯ ಎಣಿಸು
ಕಾಯಿಯ ಜತನದಿ ನಡೆಸು

ಆಟದ ಸುತ್ತು ಹಲವು
ಸಹಜವು ಸೋಲು ಗೆಲುವು
ಹಳ್ಳಿಯ ಸೊಗಡಿನ ಈ ಆಟ
ಕಲಿಸುವುದು ಜೀವನ ಪಾಠ

– ಚೇತನ ಭಾರ್ಗವ, ಬೆಂಗಳೂರು

## ಫೋಟೋ ನ್ಯೂಸ್

### ಮೇ 21 ರಂದು ಮಿನಿ ಉದ್ಯೋಗ ಮೇಳ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮೇ 21 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಈ ಮೇಳದಲ್ಲಿ 3 ರಿಂದ 4 ಕಂಪನಿಗಳು ಭಾಗವಹಿಸುತ್ತಿದ್ದು, ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಉದ್ಯೋಗ ಮೇಳದಲ್ಲಿ ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದು. ಸಂದರ್ಶನದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ ಮತ್ತು ಸ್ವ-ವಿವರ ಪ್ರತಿಗಳೊಂದಿಗೆ ನಗರದ ಹಳೇ ತಾಲ್ಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಅಂದು ನಡೆಯುವ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಆಸಕ್ತ ಅಭ್ಯರ್ಥಿಗಳು ಮಿನಿ ಉದ್ಯೋಗ ಮೇಳದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.9742718891, 9663263086, 9900827768, 63604 08094 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-1 ರ ವ್ಯಾಪ್ತಿಗೆ ಬರುವ 110/11ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳುತ್ತಿರುವುದರಿಂದ ಮೇ 18 ರಂದು ಬೆಳಿಗ್ಗೆ 07 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಎಫ್-23 ಮತ್ತು ಎಫ್-24 ರ ವ್ಯಾಪ್ತಿಯ ಹೆಚ್.ಆರ್.ಗವಿಯಪ್ಪ ವೃತ್ತ, ತೇರು ಬೀದಿ, ಜೈನ್ ಮಾರ್ಕೆಟ್, ಕಾಳಮ್ಮ ರಸ್ತೆ, ಲಾರಿ ಟರ್ಮಿನಲ್, ರಂಗ ಮಂದಿರ, ಹೊಸ ಬಸ್ ನಿಲ್ದಾಣ, ಬಂಡಿಮೊಟ್, ಗೊಲ್ಲರಹಟ್ಟಿ, ಮಾರುತಿ ಕಾಲೋನಿ, ಬಾಪೂಜಿ ನಗರ, ಕುರಿ ಕಮೇಲ, ಕಮೇಲ ರಸ್ತೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

For Ads-Call
94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ದುಃಖದುಮ್ಮಾನಗಳು ದೂರಾಗಲು ಅತ್ತುಬಿಡು



ನಾವು ತೋರಿಕೆಯ ಜೀವನವನ್ನು ಮಾಡುತ್ತಿದ್ದೇವೆ ಎಂದು ಹೇಳಿದರೆ ಬಹಳಷ್ಟು ಜನರು ಹಾಗೇನೂ ಇಲ್ಲ ಎಂದು ಹೇಳಬಹುದು ಆದರೆ ನಿಜವಾಗಿಯೂ ಹೇಳಬೇಕೆಂದರೆ ಮನುಷ್ಯನಲ್ಲಿ ಬಾಲ್ಯಾವಸ್ಥೆ ಮುಗಿದು ತಿಳುವಳಿಕೆ ಬರುವ ಹೊತ್ತಿಗೆ ಆತ ಕೆಲ ಸಾಮಾಜಿಕ ಶಿಸ್ತುಗಳಿಗೆ ಒಳಪಟ್ಟು ತೋರಿಕೆಯ ಬದುಕನ್ನು ನಡೆಸುತ್ತಾನೆ. ಆದರೆ ಮಕ್ಕಳಲ್ಲಿ ಈ ರೀತಿಯ ತೋರಿಕೆ ಇರುವುದಿಲ್ಲ. ತಮ್ಮ ಬೇಕು ಬೇಡಗಳ ಕುರಿತು ಮಕ್ಕಳಲ್ಲಿ ನಿಶ್ಚಿತವಾದ ಅಭಿಪ್ರಾಯಗಳು ಇದ್ದು ಅವುಗಳನ್ನು ನಾವು ಗುರುತಿಸದೆ ಹೋಗುತ್ತೇವೆ. ಅವರಿಗೆ ಯಾರನ್ನೂ ಪ್ರಭಾವಿಸುವ ಇಲ್ಲವೇ ಶಿಷ್ಟಾಚಾರದ ಅವಶ್ಯಕತೆ ಇಲ್ಲದೆ ಹೋಗುವುದರಿಂದ ನಮ್ಮ ಪಾಲಿಗೆ ಮಕ್ಕಳ ನಿಶ್ಚಿತ ಅಭಿಪ್ರಾಯಗಳು ಅಗೋಚರವಾಗಿಯೇ ತೋರುತ್ತವೆ.

ಮಕ್ಕಳು ಕೇವಲ ತಾವು ಬೆಳೆಯುವುದಿಲ್ಲ ಬದಲಾಗಿ ನಮ್ಮನ್ನು ಕೂಡ ಬೆಳೆಸುತ್ತಾರೆ ಅವರು ಹೀಗೆಯೇ ನಡೆಯ ಬೇಕು ಎಂದು ಕೈಯಲ್ಲಿ ಕೋಲು ಹಿಡಿದು ನಮಗೆ ಶಿಸ್ತಿನ ಪಾಠವನ್ನು ಹೇಳಿಕೊಡುವುದಿಲ್ಲ ಬದಲಾಗಿ ತಮ್ಮ ನಡವಳಿಕೆಯ ಮೂಲಕ ನಾವು ಹೇಗೆ ಇರಬೇಕು ಎಂಬುದನ್ನು ತೋರುತ್ತಾರೆ... ಅರಿಯುವ ಜಾಣ್ಮೆ ನಮಗಿರಬೇಕು ಅಷ್ಟೇ!

ತಾಯಿ ಅದೆಷ್ಟೇ ಜೋಗುಳ ಹಾಡಿದಾಗಲೂ ಮಲಗದ ಮಗು ಆಟವಾಡಿ ದಣಿದಾಗ ತನ್ನಂತಾನೆ ನಿದ್ದೆ ಬಂದು ಮಲಗುತ್ತದೆ. ಸರಿಯಾಗಿ ರಾತ್ರಿ ಹತ್ತು ಗಂಟೆಗೆ ಮಲಗಬೇಕು ಮುಂಜಾನೆ ಆರಕ್ಕೆ ಹೇಳಬೇಕು ಎಂಬ ಯಾವುದೇ ರೀತಿಯ ಕಟ್ಟುನಿಟ್ಟಿನ ಶಿಸ್ತುಗಳು ಮಕ್ಕಳಿಗೆ ಇರುವುದಿಲ್ಲ ಮಕ್ಕಳು ಬೆಳೆಯುವುದೇ ಹಾಗೆ... ಬೆಳೆಯಬೇಕು ಕೂಡ.. ಈ ಕುರಿತು ಅವರಿಗೆ ಯಾವುದೇ ಮುಜುಗರ ಇರುವುದಿಲ್ಲ. ನಿಜ ಹೇಳಬೇಕೆಂದರೆ ಮುಜುಗರ ಎಂಬ ಪದದ ಅರ್ಥವು ಅವರಿಗೆ ಗೊತ್ತಿಲ್ಲ. ಅತ್ತುಬಿಡಿ ಮಗುವಿನಂತೆ ಮನದ ನೋವು ನಿರಾಸೆಗಳೆಲ್ಲ ಹೆಪ್ಪಾಗಿಸದೇ...

ತಮಗೆ ನೋವಾದಾಗ, ಬೇಸರವಾದಾಗ ಮಕ್ಕಳು ಅತ್ತು ತಮ್ಮ ನೋವನ್ನು ತೋರಿಕೊಳ್ಳುತ್ತಾರೆ. ಬೇಕಾದುದನ್ನು ಪಡೆಯಲು ರಚ್ಚೆ ಹಿಡಿದು ದಕ್ಕಿಸಿಕೊಳ್ಳುತ್ತಾರೆ. ದೊರೆ ತುದನ್ನು ಸಂತಸದಿಂದ ಪ್ರದರ್ಶಿಸುತ್ತಾರೆ. ಮತ್ತೆ ಕೆಲವೇ ಗಂಟೆಗಳಲ್ಲಿ ಅದನ್ನು ಮರೆತು ಬೇರೊಂದು ವಸ್ತುವನ್ನು ಹಿಡಿದು ಆಡತೊಡಗುತ್ತಾರೆ. ಸಂತೋಷವಾದಾಗ ನಗುವನ್ನು ಚೆಲ್ಲುತ್ತಾರೆ. ಅದುವರೆಗೂ ಯಾರೊಂದಿಗೆ ಆಟವಾಡುವ ಸಮಯದಲ್ಲಿ ಜಗಳವಾಡುತ್ತಿದರೂ ಮತ್ತೆ ಅವರ ಕೈ ಹಿಡಿದು ಆಟವಾಡುತ್ತಾರೆ. ಪ್ರೀತಿಯಿಂದ ಮುತ್ತಿಡುತ್ತಾರೆ. ಮನಸ್ಸಿನಲ್ಲಿ ಕಹಿ, ದ್ವೇಷ ಅಸೂಯೆಗಳನ್ನು ಅವರು ಹೊಂದಿರುವುದಿಲ್ಲ. ಯಾವುದೇ ರೀತಿಯ ಭಯ, ಹಿಂಜರಿಕೆಗಳಿಲ್ಲದೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಮಕ್ಕಳನ್ನು ನೋಡಿ ನಾವು ಕಲಿಯಬೇಕು.

ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಒಂದು ಮಗುತನ ಇದ್ದೇ ಇರುತ್ತದೆ. ಹಾಗೆ ನಮ್ಮಲ್ಲಿರುವ ಮಗುವನ್ನು ನೋಯಲು ಬಿಡುವುದು ಬೇಡ. ಪ್ರಬುದ್ಧತೆಯ, ಗಾಂಭೀರ್ಯದ ಮುಖವಾಡದಡಿ ನಾವು ಬದುಕುವುದು ಬೇಡ. ಶಿಷ್ಟಾಚಾರದ ಹೆಸರಿನಲ್ಲಿ ನಮ್ಮ ಭಾವನೆಗಳನ್ನು ಹೊರ ಹಾಕದೆ ಮುಚ್ಚಿಟ್ಟು ಅವುಗಳ ಮೇಲೆ ಗಾಂಭೀರ್ಯದ ಸಮಾಧಿಯನ್ನು ಕಟ್ಟುವುದು ಕೂಡ ಬೇಡ.

ದಣಿವಾದಾಗ ನಿದ್ರಿಸಬೇಕು ನಮ್ಮ ದೇಹ ಅತ್ಯಂತ ಪವಿತ್ರವಾದದ್ದು. ತನಗೇನು ಬೇಕು ಎಂಬುದರ ಸ್ಪಷ್ಟ ಅರಿವಿರುವ ನಮ್ಮ ದೇಹದ ತಾಳಕ್ಕೆ ನಾವು ಹೆಜ್ಜೆ ಹಾಕಲೇಬೇಕು. ನಮ್ಮ ದೇಹವು ತನ್ನೆಲ್ಲ ಬೇಕು ಬೇಡಗಳ ಅರಿವನ್ನು ಹೊಂದಿದ್ದು ಅದರ ಅವಶ್ಯಕತೆಗಳನ್ನು ಕಡೆಗಾಣಿಸುವುದು ಬೇಡ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ
Scan For Digital Colourful
HAMPI TIMES E-paper

ನಿದ್ರಿಸಲು ಗಡಿಯಾರವನ್ನು ಕ್ಯಾಲೆಂಡರನ್ನು ನೋಡುವುದು ಬೇಡ... ಗಡಿಯಾರವಿರುವುದು ಸಮಯ ನೋಡಲು ಮತ್ತು ಕ್ಯಾಲೆಂಡರ್ ಇರುವುದು ದಿನಗಳನ್ನು ಪರಿಗಣಿಸಲು. ದೇಹಕ್ಕೆ ಬೇಕೆಂದಾಗ ನಿದ್ರಿಸಲು ಯಾವುದೇ ರೀತಿಯ ಮುಜುಗರ, ಹಿಂಜರಿಕೆ ಮತ್ತು ಅಪರಾಧೀ ಮನೋಭಾವವನ್ನು ಇಟ್ಟುಕೊಳ್ಳುವುದು ಬೇಡ. ದಣಿವಾದಾಗ ಖಂಡಿತವಾಗಿಯೂ ವಿಶ್ರಾಂತಿ ಪಡೆಯಿರಿ. ನಿದ್ರೆ ಮಾಡುವುದು ಸೋಮಾರಿತನವಲ್ಲ.... ನಿಮ್ಮ ದೇಹ ಮನಸುಗಳನ್ನು ಸಮತೋಲನದಲ್ಲಿ ಇಡುವ ಒಂದು ಕ್ರಿಯೆ.

ಮನದ ದುಃಖ ದುಮ್ಮಾನಗಳನ್ನು ಅದುಮಿಟ್ಟುಕೊಳ್ಳದೆ ಉಸಿರು ಬಿಗಿ ಹಿಡಿದು, ಹಲ್ಲು ಕಚ್ಚಿ ನೋವನ್ನು ಸಹಿಸಿಕೊಳ್ಳುವ ಅವಶ್ಯಕತೆಯಿಲ್ಲ. ಅತ್ತುಬಿಡಿ! ಎಲ್ಲಾ ನೋವು, ನಿಟ್ಟುಸಿರುಗಳು ನಿಮ್ಮ ಅಳುವಿನ ಜೊತೆ ಹರಿದು ಹೋಗಲಿ... ನಿಮ್ಮ ಕಣ್ಣೀರಿನೊಂದಿಗೆ ಕರಗಲಿ. ಕಣ್ಣೀರು ನಿಮ್ಮ ಸೋಲಿನ ಸಂಕೇತವಲ್ಲ. ನಿಮ್ಮ ಕಣ್ಣೀರು ನಿಮ್ಮೆಲ್ಲ ನೋವು, ಸಂಕಟ ಮತ್ತು ದುಗುಡಗಳನ್ನು ಹೊರ ಹಾಕುವ ಮೂಲಕ ನಿಮ್ಮ ದೇಹಕ್ಕೆ ನೀವು ಕೊಡುವ ಒಂದು ನೆಮ್ಮದಿ, ಅಸ್ತವ್ಯಸ್ತವಾಗಿರುವ ಮನೆಯನ್ನು ಸ್ವಚ್ಛ ಮಾಡಿದಾಗ ದೊರೆಯುವಂತಹ ನೆಮ್ಮದಿಯೇ ಅತ್ತು ಕಣ್ಣೀರ್ಗರೆದಾಗ ಮನದ ಕೋಣೆ ಸ್ವಚ್ಛವಾಗಿ ನಿರಾಳ ವೆಸುತ್ತವೆ. ಆಗ ಮುಂದಿನ ದಾರಿಯ ಕುರಿತು ನಿಚ್ಚಳವಾಗಿ ಯೋಚಿಸಲು ಸಾಧ್ಯವಾಗುತ್ತದೆ. ನಮ್ಮ ಕಣ್ಣೀರು ನಮ್ಮ ಶಕ್ತಿಯ ಸಂಕೇತವೇ ಹೊರತು ಹೇಡಿತನವಲ್ಲ ಅದು ನಮ್ಮನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ನಕ್ಕು ಬಿಡು ಒಮ್ಮೆ ಮಕ್ಕಳ ಹಾಗೆ... ಪ್ರತಿ ಸಣ್ಣ ಪುಟ್ಟ ಕಾರಣಗಳಿಗೆ ಮುಖದಲ್ಲಿ ಹೂ ನಗೆ ಅರಳಲಿ. ಒಂದು ಸುಂದರ ಮುಂಜಾವು, ಒಂದು ಪುಟ್ಟ ನೆನಪು , ಮಗುವಿನ ಮುಗ್ಧ ಮುಖ ನಮ್ಮ ಮುಗುಳುನಗೆಗೆ ಕಾರಣವಾಗಲಿ. ಕೇವಲ ಜೋಕುಗಳಿಗೆ ನಗುವುದು ನಗುವಲ್ಲ... ಮನದ ಕಾವಳವನ್ನು ಕಳೆಯುವ ಬೆಳದಿಂಗಳಂತಹ ನಗೆ ನಿಮ್ಮ ಮುಖದಲ್ಲಿ ಚೆಲ್ಲಲಿ. ನಗಲು ನಮಗೆ ಯಾವುದೇ ಕಾರಣಗಳು ಬೇಕಿಲ್ಲ.

ಮಕ್ಕಳು ತಮ್ಮ ಮನಸ್ಸಿಗೆ ಸಂತೋಷವಾದಾಗ ಸಮಯ ಸಂದರ್ಭಗಳ ಅರಿವಿಲ್ಲದೆ ನಕ್ಕು ಬಿಡುತ್ತಾರೆ. ಶಿಷ್ಟಾಚಾರದ ನೆಪದಲ್ಲಿ ನಾವು ದೊಡ್ಡವರು ನಗಬೇಕಾದ ಸಂದರ್ಭಗಳಲ್ಲಿಯೂ ಕೂಡ ದಿವ್ಯ ಮೌನವನ್ನು ವಹಿಸಿ ಗಾಂಭೀರ್ಯದ ಮುಖಮುದ್ರೆಯನ್ನು ಹೊಂದಿರುತ್ತೇವೆ. ನಾಗರಿಕ ಸಮಾಜದ ದೃಷ್ಟಿಕೋನದಲ್ಲಿ ಕೊಂಚ ಅಸಹಜ ಎಂದೆನಿಸಿದರೂ ನಿಮ್ಮ ನಗು ಮುಖವನ್ನು ಎಂದಿಗೂ ಗಾಂಭೀರ್ಯದ ಮುಖವಾಡದ ಹಿಂದೆ ಬಚ್ಚಿಡಬೇಡಿ. ನಮ್ಮ ಬದುಕಿನಲ್ಲಿ ನಗು ತನ್ನದೇ ಲಯವನ್ನು ಹೊಂದಿರಲಿ.

ಮಕ್ಕಳು ಯಾವುದೇ ರೀತಿಯ ಪೂರ್ವಾಗ್ರಹಗಳಿಗೆ ಒಳಗಾಗುವುದಿಲ್ಲ ತಮಗೆ ಸರಿ ಕಂಡದ್ದನ್ನು ಒಪ್ಪುವ ಬೇಡವಾದದ್ದನ್ನು ತಿರಸ್ಕರಿಸುವ ಮೂಲಕ ತಮ್ಮ ಆತ್ಮಸಾಕ್ಷಿಗೆ ( ಆತ್ಮಸಾಕ್ಷಿ ಎಂಬ ಪದದ ಅರ್ಥ ಅವರಿಗೆ ಗೊತ್ತಿಲ್ಲದಿದ್ದರೂ ) ಒಗ್ಗುವಂತೆ ಇರುತ್ತಾರೆ. ಆದ್ದರಿಂದ ಕೆಲ ವೈಯುಕ್ತಿಕ ವಿಷಯಗಳಲ್ಲಾದರೂ ಮಗುವಿನಂತೆ ನಮ್ಮ ಬದುಕನ್ನು ನಡೆಸೋಣ.... ತೋರಿಕೆಯ ಬದುಕು ನಮ್ಮದಾಗದಿರಲಿ.

**ಇತ್ತೀಚಿನ ಮಕ್ಕಳು ಅಥವಾ ಜನರೇಷನ್ ತತಕ್ಷಣಕ್ಕೆ ಪ್ರತಿಫಲ ಹೊಂದಲು ಮತ್ತು ಅಂದುಕೊಂಡಿದ್ದನ್ನು ಸಾಧಿಸಲು ಅವಶ್ಯಕವಾದ ಸಮಯದ ವರೆಗೆ ಕಾಯಲು ಸಿದ್ಧವಿಲ್ಲ. ಹಾಗಾಗಿ ನಮ್ಮ ಮಕ್ಕಳು ಹಣ ಸಂಪಾದನೆಗಾಗಿ, ಅನೈತಿಕ ಅಡ್ಡದಾರಿಗಳನ್ನು ಹಿಡಿಯುತ್ತಿದ್ದಾರೆ. ಇದು ಮುಂದಿನ ಸತ್ವಯುತ, ಆರೋಗ್ಯಯುತ ಮತ್ತು ಸಂಗರ್ಷರಹಿತ ಸಮಾಜ ನಿರ್ಮಾಣಕ್ಕೆ ಹಾನಿಯಾಗುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಸ್ಪಷ್ಟವಾಗಿ ಅಲ್ಲಲ್ಲಿ ಗೋಚರಿಸುತ್ತಿದೆ.**

# ಗಿಡವಾಗಿ ಬಗ್ಗದ್ದು... ಮರವಾಗಿ ಬಗ್ಗೀತೆ..?

ಬಹುತೇಕ ಪೋಷಕರ ಸಹಜವಾದ ಅರೋಪವೇನೆಂದರೆ, ನಮ್ಮ ಮಕ್ಕಳು ಮಾತು ಕೇಳುತ್ತಿಲ್ಲ. ನಮ್ಮ ಮಕ್ಕಳೇನು ಇಂದಿನ ಈ ಜನರೇಷನ್ ಸರಿ ಇಲ್ಲ, ದೊಡ್ಡವರಿಗೆ ಗೌರವ ಕೊಡುವುದಿಲ್ಲ, ನಮ್ಮ ಸಂಸ್ಕೃತಿ ಆಚಾರ ವಿಚಾರಗಳ ಬಗ್ಗೆ ಅರಿವಿಲ್ಲ ಎನ್ನುವುದೇ ಆಗಿರುತ್ತದೆ. ಇರಬಹುದು ಮೇಲ್ನೋಟಕ್ಕೆ ಇದು ಸರಿ ಅನಿಸಿದರೂ, ಇದನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸಿದರೆ ಈ ಸಮಸ್ಯೆಯ ಆಳ ಮತ್ತು ಹರವು ಹಾಗು ಅದರ ಮೂಲ ಕಾರಣವನ್ನು ನಾವು ಕಂಡುಕೊಳ್ಳಬಹುದಾಗಿದೆ.

ಇಂದು ನಾವು ದೂಷಿಸುತ್ತಿರುವ ಈ ಜನರೇಷನ್ ಏಕೆ ಹೀಗೆ? ಎಂದರೆ ಮತ್ತದೇ ಅವರ ಬಾಲ್ಯ ಮತ್ತು ಅವರಿಗೆ ನೀಡಿದ ಪೋಷಣೆಯಲ್ಲಿಯನ ನ್ಯೂನತೆ ಎದ್ದು ಕಾಣುತ್ತದೆ. ಪ್ರತಿಯೊಬ್ಬ ಪಾಲಕರೂ ಯೋಚಿಸುವಂತಹ ರೀತಿಯನ್ನು ಒಮ್ಮೆ ಅವಲೋಕಿಸಬೇಕಾಗುತ್ತಗೆ. ನಾವು ನೋಡುವಂತೆ ಬಹಳಷ್ಟು ಜನ ಪಾಲಕರ, ಪೋಷಕರ ಬಹುದೊಡ್ಡ ಕನಸು ಎಂದರೆ ನನ್ನ ಮಗುವಿಗೆ ಬಯಸಿದ್ದೆಲ್ಲಾ ಸಿಗಬೇಕು, ಅವರಿಗೆ ಯಾವತ್ತೂ ಯಾವುದೇ ರೀತಿಯ ನೋವಾಗಲೀ, ನಿರಾಸೆಯಾಗಲೀ ಅವರ ಅರಿವಿಗೆ ಬರಬಾರದು. ನಾನು ಪಟ್ಟ ಬಡತನ, ನಿರಾಕರಣೆ ಕಷ್ಟ ನಮ್ಮ ಮಕ್ಕಳಿಗೆ ಎಂದೂ ಬರಬಾರದು ಅನ್ನುವುದೇ ಆಗಿರುತ್ತದೆ.

ಮಾನವ ಸಹ ಪ್ರಕೃತಿಯಲ್ಲಿನ ಒಂದು ಅಂಶವಾಗಿರುವುದರಿಂದ, ಪ್ರಕೃತಿಯಲ್ಲಿ ನಡೆಯುವಂತಹ ಸೂಕ್ಷ್ಮ ಚಟುವಟಿಕೆಗಳನ್ನು, ಅಲ್ಲಿ ಉಂಟಾಗುತ್ತಿರುವ ಬದಲಾವಣೆಯನ್ನು ಅದಕ್ಕೆ ತಕ್ಕಂತೆ ಅಲ್ಲಿಯ ಜೈವಿಕವ್ಯವಸ್ಥೆಯಪ್ರತಿಸ್ಪಂದನೆಯನ್ನು ಗಮನಿಸಬೇಕು. ಉದಾ: ಒಂದು ಕಂಬಳಿಹುಳ ದಿಢೀರ್ ಎಂದು ಚಿಟ್ಟೆಯಾಗಿದ್ದು ಯಾರಾದರು ಕಾಣಲು ಸಾಧ್ಯವೆ? ಒಂದು ವೇಳೆ ಸಹಜವಾದ ಈ ಪ್ರಾಕೃತಿಕ ಕ್ರಿಯೆಯನ್ನು ನಡೆಯಲು ಬಿಡದೇ ಹೋದರೆ ಏನಾಗಬಹುದು...? ಎಂದು ಯಾವತ್ತಾದರು ಯೋಚಿಸಿದ್ದೀರಿ.

ಸಹಜವಾಗಿ ಅರಳಬೇಕಾದ ಮೊಗ್ಗಂದನ್ನು ಬಲವಂತದಿಂದಾಗಿ ಅರಳಿಸಲು ಹೋದರೆ, ಏನಾಗಬಹುದು...? ಅದೇ ಇಂದು ನಮ್ಮ ಮಕ್ಕಳೊಂದಿಗೆ ನೆಡೆಯುತ್ತಿರುವ ಕ್ರಿಯೆಯಾಗಿದೆ. ಅದರಿಂದಾಗಿಯೇ ನಾವು ನೋಡುತ್ತಿರುವ ನಮ್ಮ ನೆಚ್ಚಿನ ಈ ಮಕ್ಕಳು, ಇಂದಿನ ಅವರ ಈ ರೀತಿಯ ವರ್ತನೆಗೆ ಕಾರಣವಾಗಿರುವುದು ಪಕ್ಕಾಗುತ್ತದೆ.

ವಸ್ತು ಸ್ಥಿತಿ ಹೀಗಿದ್ದಾಗ ನಾವು ನಮ್ಮ ಮಕ್ಕಳ ಅರಿವಿಗೆ ಯಾವ ನೋವು, ನಿರಾಸೆ ಉಂಟಾಗಬಾರದು ಎನ್ನುವಂತಹದ್ದು. ಯಾವುದೇ ಕಾರಣಕ್ಕೂ ನಮ್ಮ ಕಷ್ಟಗಳೂ ಅವರಿಗೆ ತಿಳಿಯಬಾರದೆಂದು ಮರೆಮಾಚುತ್ತ ಹೋದರೆ ಅದರ ಪರಿಣಾಮ ಏನಾಗಬುಹುದು..? ಅದೇ ಈಗಾಗಿರುವುದು.

ಹಾಗೆ ಬೆಳೆದ ಆ ಮಕ್ಕಳಿಂದ ಸಹಜವಾಗಿ ಯಾವುದೇ ಕೃತಜ್ಞತೆಯಾಗಲಿ, ಮೆಚ್ಚುಗೆಯಾಗಲಿ, ಸಮಾಜದ ಕುರಿತ ಜವಾಬ್ದಾರಿಯಾಗಲಿ ನಿರೀಕ್ಷೆ ಮಾಡಲು ಸಾಧ್ಯವಾಗುವುದಿಲ್ಲ. ಬದಲಿಗೆ ಇದಾವುದರ ಅರಿವೇ ಇಲ್ಲದೆ ಅವರು ಬದುಕುವುದನ್ನು ರೂಢಿಸಿಕೊಂಡು ಬಿಡುತ್ತಾರೆ. ಇಂದಿನ ತಮ್ಮ ಈ ಸ್ಥಿತಿಗೆ ಪಾಲಕರೇ ಕಾರಣ ಇಂದು ನಮಗೆ ಸಿಕ್ಕುತ್ತಿರುವುದನ್ನೆಲ್ಲಾ ಸಿಗಬೇಕಾಗಿದ್ದುದ್ದೇ ಎಂದುಕೊಳ್ಳುತ್ತಾರೆ.

ಒಂದು ವೇಳೆ ಈ ರೀತಿಯ ವ್ಯವಸ್ಥೆಯ ಪೂರೈಕೆಯಲ್ಲಿ ಅಡಚಣೆಯಾದರೆ, ಒಂದು ವೇಳೆ ಅವು ಸಿಗದೇ ಹೋದರೆ, ಅದಕ್ಕೆ ಕಾರಣ ಸ್ವತಃ ತಮ್ಮನ್ನು ಜವಾಬ್ದಾರಿ ಮಾಡಿಕೊಳ್ಳದೇ ಇತರರನ್ನೋ, ಅಲಿಯ ವ್ಯವಸ್ಥೆಯನ್ನೋ ಕೊನೆಯ ದಾಗಿ ತಮ್ಮ ಮನೆಯವರನ್ನೂ ಕಾರಣ ಮಾಡಿನಿಂದಿಸಲುಪ್ರಾಂಭಮಾಡುತ್ತಾರೆ. ಜೊತೆಗೆ ಸಮಾಜದ ಮೇಲಿನ ಗೌರವ ಆದರಗಳನ್ನು ಕಳೆದುಕೊಳ್ಳುತ್ತಾರೆ.




ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ
Scan For Digital Colourful
HAMPI TIMES E-paper


ಪ್ರತಿ ನಿತ್ಯ ಸಾಮಾಜಿಕ ಮಾಧ್ಯಮಗಳಲ್ಲಿ ನಾವು ಕಾಣುವ ಅನೇಕ ಅಸಹಜ ಘಟನೆಗಳ ಹಿಂದೆ ಇದೇ ಕಾರಣ ಅಡಗಿರುವುದನ್ನು ಮನಗಾಣಬೇಕಿದೆ. ಯಾವುದೋ ಒಂದು ಸಣ್ಣ ನಿರಾಸೆ, ಚಿಕ್ಕ ನಿರಾಕರಣೆ, ಒಂದು ನೋವು ಅವರನ್ನು ಕಾಡಿದಾಗ, ನಮ್ಮ ಮಕ್ಕಳು ಅದನ್ನು ನಿಭಾಯಿಸಲಾಗದೇ ಅನೈತಿಕ, ಅನ್ಯಾಯದ ಕೊನೆಯಲ್ಲಿ ಆತ್ಮಹತ್ಯಯ ಮೊರೆ ಹೋಗುವುದನ್ನು, ಯಾವುದೋ ಒಂದು ಗೀಳಿಗೆ ಮೊರೆ ಹೋಗುವುದು ಅಥವಾ ಸಮಾಜಿಕ ವಿರೋದಿಯಾಗಿ ಬದಲಾದರೆ ಅದಕ್ಕೆ ಅವರ ಪೋಷಕರಾದ ನಾವೆ ಸಂಪೂರ್ಣ ಹೊಣೆಯಾಗುತ್ತೇವೆ ಎನ್ನುವುದನ್ನು ಮರೆಯಬಾರದು.



ನಮಗೆಲ್ಲ ಗೊತ್ತಿರುವಂತೆ ಇತ್ತೀಚಿನ ಮಕ್ಕಳು ಅಥಾವ ಜನರೇಷನ್ ತತಕ್ಷಣಕ್ಕೆ ಪ್ರತಿಫಲ ಹೊಂದಲು ಮತ್ತು ಅಂದುಕೊಂಡಿದ್ದನ್ನು ಸಾಧಿಸಲು ಅವಶ್ಯಕವಾದ ಸಮಯದ ವರೆಗೆ ಕಾಯಲು ಸಿದ್ಧವಿಲ್ಲ. ಹಾಗಾಗಿ ನಮ್ಮ ಮಕ್ಕಳು ಹಣ ಸಂಪಾದನೆಗಾಗಿ, ಅನೈತಿಕ ಅಡ್ಡದಾರಿಗಳನ್ನು ಹಿಡಿಯುತ್ತಿದ್ದಾರೆ. ಇದು ಮುಂದಿನ ಸತ್ವಯುತ, ಆರೋಗ್ಯಯುತ ಮತ್ತು ಸಂಗರ್ಶರಹಿತ ಸಮಾಜ ನಿರ್ಮಾಣಕ್ಕೆ ಹಾನಿಯಾಗುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದು ಸ್ಪಷ್ಟವಾಗಿ ಅಲ್ಲಲ್ಲಿ ಗೋಚರಿಸುತ್ತಿದೆ.

ಇದಕ್ಕಾಗಿ ನಾವು ನಮ್ಮ ಮಕ್ಕಳನ್ನು ವಾಸ್ತವದಲ್ಲಿ ಬೆಳಸಬೇಕು, ಅವರಿಗೂ ಪಾಲಕರಾದ ನಮ್ಮ ನೋವು ನಲಿವು ತಿಳಿಯಲಿ ಬಿಡಿ. ನಿರಾಸೆ, ಕಾದು ಪಡೆವ ಶ್ರಮದ ಆನಂದ ಅವರಿಗೂ ಗೊತ್ತಾಗಲಿ ಬಿಡಿ. ಆಗ ಮಾತ್ರ ಕಷ್ಟಕ್ಕೆ ಮಿಡಿಯುವ, ಇತರರಿಗಾಗಿ ತುಡಿಯುವ ಮಾನಸಿಕತೆ ಬೆಳೆಯಲು ಸಾಧ್ಯ. ಆಗ ಮಾತ್ರ ಸುಸ್ಥಿರ ಆರೋಗ್ಯಯುತ ಸಮಾಜ ಕಟ್ಟಲು ಸಾಧ್ಯ. ಅಂತಹ ಎಲ್ಲಾ ಸುಂದರ ಅಂಶಗಳ ಒಳಗೊಂಡಂತಹ ಸುಂದರ ತೋಟದಲ್ಲಿ ನಗುವ ಹೂವುಗಳಂತೆ ನಮ್ಮ ಮಕ್ಕಳು ತಾವಾಗಿಯೇ ಅರಳವುದರಲ್ಲಿ ಸಂದೇಹವಿಲ್ಲ. ಇದು ಕೋಡ ಬಾಲ್ಯದಲ್ಲೇ ಆದರೆ ಮಾತ್ರ ಸಾಧ್ಯ ಹಾಗಾಗಿ ಗಿಡವಾಗಿ ಬಗ್ಗದ್ದು... ಮರವಾಗಿ ಬಗ್ಗೀತೆ..? ಎನ್ನುವುದು.



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 17–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.08 ಅಡಿ |
| ಒಳ ಹರಿವು | 1249 ಕ್ಯುಸೆಕ್ |
| ಹೊರ ಹರಿವು | 2378 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.052 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1577.57 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.404 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

18–05–2025 – ಭಾನುವಾರ

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಾಢ |
| ಯೋಗ | : ಶುಭ |
| ಕರಣ | : ತೈತುಲ |
| ಸೂರ್ಯೋದಯ | : 05:45:47 |
| ಸೂರ್ಯಾಸ್ತ | : 19:01:14 |
| ರಾಹು ಕಾಲ | : 17:22–19:01 |
| ಯಮಘಂಡ ಕಾಲ | : 12:24–14:03 |
| ಗುಳಿಕ ಕಾಲ | : 15:42–17:22 |

### ಮೈಕ್ರೋ ನ್ಯೂಸ್

## ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ ಸಮೀಕ್ಷೆ ಕಾರ್ಯ ಅವಧಿ ವಿಸ್ತರಣೆ

ಮೊದಲ ಪುಟದಿಂದ

(ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ) ಮೇ 26 ರಿಂದ 28 ರವರೆಗೆ 3 ದಿನಗಳ ಕಾಲ. ಆನ್‌ಲೈನ್ ಮೂಲಕ ಮೇ 19 ರಿಂದ 28 ರವರೆಗೆ ಸ್ವಯಂ ಘೋಷಣೆಗೆ ಕಾಲ ನಿಗದಿಪಡಿಸಲಾಗಿದೆ.

ಮೇ 26 ರಿಂದ 28 ರವರೆಗೆ ವಿಶೇಷ ಶಿಬಿರದಲ್ಲಿ ನಡೆಸಬೇಕಾದ ಸಮೀಕ್ಷೆಯಲ್ಲಿ ಗಣತಿದಾರರು ಘೋಷಿತ ಮತಗಟ್ಟೆಗಳಲ್ಲಿ ಖುದ್ದಾಗಿ ಉಪಸ್ಥಿತರಿದ್ದು, ಮನೆ–ಮನೆ ಸಮೀಕ್ಷೆಯಲ್ಲಿ ಒಂದು ವೇಳೆ ಕೈಬಿಟ್ಟು ಹೋದಂತಹ ಪರಿಶಿಷ್ಟ ಜಾತಿಯ ಕುಟುಂಬದವರು ಶಿಬಿರಕ್ಕೆ ಆಗಮಿಸಿದಾಗ ಸುಸೂತ್ರವಾಗಿ ಸಮೀಕ್ಷೆ ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ.ಮಲ್ಲಿಕಾರ್ಜುನ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮುಂಗಾರು ಹಂಗಾಮಿನ ಪೂರ್ವಸಿದ್ಧತೆ । ವಿಕಸಿತ ಕೃಷಿ ಸಂಕಲ್ಪ ಅಭಿಯಾನ । ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿಕೆ

# ರಸಾಯನಿಕ ಬಳಕೆ ತಗ್ಗಿಸಿ ಜನರ ಆರೋಗ್ಯ ಕಾಪಾಡಿ

**ಹಂಪಿ ಟೈಮ್ಸ್ ಕೊಪ್ಪಳ**

ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗೆ ಅವಶ್ಯವಿರುವ ಬಿತ್ತನೆ ಬೀಜ, ರಸಗೊಬ್ಬರದ ಜೊತೆಗೆ ರೈತರಿಗೆ ಕೃಷಿ ಇಲಾಖೆಯ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ತಲುಪಿಸಬೇಕೆಂದು ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಶನಿವರ ಜಿಲ್ಲಾ ಪಂಚಾಯತ್ ಜೆ. ಹೆಚ್.ಪಟೇಲ್ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ, ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೊಪ್ಪಳದ ಕೃಷಿ ತಂತ್ರಜ್ಞರ ಸಂಸ್ಥೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 2025–26ನೇ ಸಾಲಿನ ಮುಂಗಾರು ಹಂಗಾಮಿನ ಪೂರ್ವಸಿದ್ಧತೆ, ದ್ವೈಮಾಸಿಕ ಕಾರ್ಯಾಗಾರ ಹಾಗೂ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಉದ್ಘಾಟಿಸಿ ಮಾತನಾಡಿದರು.

ಈ ವರ್ಷ ಮುಂಗಾರು ಹಂಗಾಮಿನ ಸಿದ್ಧತೆ ಪೂರ್ವದಲ್ಲಿ ರಾಜ್ಯ ಸರ್ಕಾರವು ರೈತರಿಗೆ ಬೇಕಾಗಿರುವ ಬಿತ್ತನೆ ಬೀಜಗಳು, ರಸಗೊಬ್ಬರಗಳ ವ್ಯವಸ್ಥೆಯ ಜೊತೆಗೆ ಸರ್ಕಾರದ ಅನೇಕ ಯೋಜನೆಗಳು ಮತ್ತು ಕಾರ್ಯಕ್ರಮ ಬಗ್ಗೆಯೂ ಸಹ ರೈತರಿಗೆ ತಿಳಿಸುವಂತಹ ಪ್ರಯತ್ನವನ್ನು ಕೃಷಿ ಇಲಾಖೆಯ ಮೂಲಕ ಮಾಡುತ್ತಿದೆ. ನಮ್ಮ ಸರ್ಕಾರವು ಹೆಚ್ಚು ರೈತರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ನೀಡಿದೆ. ಈ ಬಾರಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಮುಂಗಾರು ಬಿತ್ತನೆ ಪ್ರಾರಂಭವಾಗಲಿದೆ. ಬಿತ್ತನೆ ಬೀಜ ಮತ್ತು ಗೊಬ್ಬರಕ್ಕೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ನೋಡಿಕೊಳ್ಳಿ ಎಂದರು.

ಇತ್ತೀಚೆಗೆ ಆನೆಕಲ್ಲು ಮಳೆಯಿಂದಾಗಿ ಅನೇಕ ಭಾಗಗಳಲ್ಲಿ ಭತ್ತದ ಬೆಳೆ ನಷ್ಟವಾಗಿದ್ದು, ಇದಕ್ಕೆ ಪರಿಹಾರ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ. ರೈತರು ಉತ್ತಮ ಬೆಳೆ ಬೆಳೆದಾಗ ಸರಿಯಾದ ಬೆಲೆ ಸಿಗುವುದಿಲ್ಲ ಹಾಗೂ ಉತ್ತಮ ಬೆಳೆಯಿದ್ದಾಗ ಆ ಬೆಳೆಗೆ ಸರಿಯಾದ ಬೆಲೆ ಇರುವುದಿಲ್ಲ. ಈ ಕಾರಣದಿಂದ ಸಾಲದಿಂದ ಮುಕ್ತಿಹೊಂದಲು ರೈತರಿಗೆ ಕಷ್ಟವಾಗುತ್ತದೆ. ರೈತರಿಗಾಗಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಕೃಷಿ ಇಲಾಖೆಯಿಂದ ಜಾರಿಗೊಳಿಸಲಾಗುತ್ತಿದೆ. ಈ ಹಿಂದೆ ನಮ್ಮ ಸರ್ಕಾರವು ಜಾರಿಗೆ ತಂದ ಕೃಷಿ ಹೊಂಡ ನಿರ್ಮಾಣ ಯೋಜನೆಯಿಂದಾಗಿ ಬಹಳಷ್ಟು ರೈತರಿಗೆ ಅನುಕೂಲವಾಗಿದೆ. ವಿಕಸಿತ ಕೃಷಿ ಸಂಕಲ್ಪ




ಅಭಿಯಾನದಡಿ ಇಂದು ಮಣ್ಣು ಪರೀಕ್ಷಾ ವಾಹನಗಳನ್ನು ಉದ್ಘಾಟಿಸ ಲಾಗಿದ್ದು, ರೈತರು ಹೆಲ್ಪ್ ಲೈನ್‌ಗೆ ಕರೆ ಮಾಡಿದಾಗ ತ್ವರಿತಗತಿಯಲ್ಲಿ ಸ್ಪಂದನೆ ನೀಡಬೇಕು. ಇದರ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿ, ಮಣ್ಣು ಪರೀಕ್ಷಿಸಿ, ಅಲ್ಲಿ ಯಾವ ಬೆಳೆ ಬೆಳೆಯಲು ಸೂಕ್ತವೆಂದು ರೈತರಿಗೆ ಮಾಹಿತಿ ನೀಡಬೇಕು. ಈ ಬಗ್ಗೆ ಅಧಿಕಾರಿಗಳು ಚುರುಕಾಗಿ ಕೆಲಸ ಮಾಡಬೇಕೆಂದು ಹೇಳಿದರು.

ಜಿಲ್ಲೆಯಲ್ಲಿ ನೀರಾವರಿ ಪ್ರದೇಶದಲ್ಲಿ ಹಾಗೂ ವಿಶೇಷವಾಗಿ ಭತ್ತ ಬೆಳೆಯುವ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಸಾಯನಿಕಗೊಬ್ಬರಗಳ ಬಳಕೆಯಾಗುತ್ತಿದ್ದು, ಇದು ಜನರ ಆರೋಗ್ಯಕ್ಕೆ ಹಾನಿಕಾರವಾಗುವ ಜೊತೆಗೆ ಭೂಮಿಯ ಫಲವತ್ತತೆಯನ್ನು ಸಹ ಹಾಳು ಮಾಡುತ್ತದೆ. ಇದಕ್ಕಾಗಿ ಸಾವಯವ ಕೃಷಿಗೆ ಹೆಚ್ಚಿನ ಅದ್ಯತೆ ನೀಡಬೇಕಿದೆ. ಈ ಬಗ್ಗೆ ಜಿಲ್ಲೆಯ ರೈತರಿಗೆ ಅರಿವು ಮೂಡಿಸಬೇಕು ಎಂದರು.

ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಮಾತನಾಡಿ, ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದ್ದು, ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರಕ್ಕೆ ಯಾವುದೇ ಕೊರತೆಯಿಲ್ಲ. ಬೇಡಿಕೆಗಿಂತಲು ಶೇ.20 ರಷ್ಟು ಹೆಚ್ಚಿನ ಪ್ರಮಾಣದ ಬೀಜ–ಗೊಬ್ಬರವನ್ನು ದಾಸ್ತಾನು ಇರಲಿದೆ. ಬೀಜ ಮತ್ತು ರಸಗೊಬ್ಬರ ಮಾರಾಟಗಾರರು ಎಂ.ಆರ್.ಪಿ.ಗಿಂತ ಹೆಚ್ಚಿನ ದರಕ್ಕೆ ಬಿತ್ತನೆ ಬೀಜ ಮತ್ತು ರಸಗೊಬ್ಬರಗಳನ್ನು ಮಾರಾಟ ಮಾಡಿರುವ ಬಗ್ಗೆ ಯಾವುದೇ ದೂರು ಬಂದಲ್ಲಿ ಅಂತಹವರ ವಿರುದ್ಧ ಕಾನೂನು ಮೂಲಕ ಕ್ರಮ ಕೈಗೊಳ್ಳಲಾಗುವುದು. ಭತ್ತ ಬೆಳೆಯುವ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದ ರಸಾಯನಿಕಗಳ ಬಳಕೆಯನ್ನು ತಡೆಯಲು ಈಗಾಗಲೇ ಜಾಗೃತಿ ಮೂಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ರೇಷ್ಮೆ, ತೋಟಗಾರಿಕೆ, ಪಶುಪಾಲನೆ ಪ್ರಮಾಣವನ್ನು ಹೆಚ್ಚಿಸುವುದರ ಜೊತೆಗೆ ಕೃಷಿ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸಿ, ಸಮಗ್ರ ಸಾವಯವ ಕೃಷಿಗೆ ಉತ್ತೇಜನ ನೀಡಲು ಪ್ರಯತ್ನಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ತೋಟಗಾರಿಕೆ ಕ್ಷೇತ್ರವು ಹೆಚ್ಚಾಗುತ್ತಿದೆ ಹಾಗೂ ಪ್ರಾಣಿಗಳ ಸಂಖ್ಯೆಯು ಹೆಚ್ಚಾಗಿದೆ ಎಂದು ಹೇಳಿದರು.

ಕೃಷಿಯೊಂದಿಗೆ ಕೋಳಿ, ಕುರಿ ಮತ್ತು ಧನಕರುಗಳ ಸಾಕಾಣಿಕೆ ಹಾಗೂ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರಿಂದ ಮಣ್ಣಿ ಫಲವತ್ತತೆ ಉತ್ತಮವಾಗಿರುತ್ತದೆ. ಜಿಲ್ಲೆಯಲ್ಲಿ ಈ ರೀತಿಯ ಸಮಗ್ರ ಕೃಷಿ ವ್ಯವಸ್ಥೆಯನ್ನು ಜಾರಿಗೆ ಮಾಡಬೇಂದು ಯೋಜನೆಯನ್ನು ರೂಪಿಸಲಾಗಿದೆ. ಜಿಲ್ಲೆಯ ಸರಿ ಸುಮಾರು 4.50 ಲಕ್ಷ ಹೆಕ್ಟರ್ ಭೂಮಿಯಲ್ಲಿ ವ್ಯವಸಾಯ ಮಾಡಲಾಗುತ್ತಿದ್ದು, ಇದರಲ್ಲಿ 55 ಸಾವಿರ ಹೆಕ್ಟರ್ ಭೂಮಿಯನ್ನು ತೋಟಗಾರಿಕೆ ಕ್ಷೇತ್ರದಲ್ಲಿ ತೊಡಗಿಸಲಾಗಿದೆ. ಕಳೆದ ಐದು ವರ್ಷಗಳ ಹಿಂದೆ 25 ಸಾವಿರ ಹೆಕ್ಟರ್‌ಗಿಂತಲು ಕಡಿಮೆ ತೋಟಗಾರಿಕೆ ಪ್ರದೇಶವಿತ್ತು. ಮುಂಬರುವ ವರ್ಷಗಳಲ್ಲಿ 1.50 ಲಕ್ಷ ಹೆಕ್ಟರ್ ಪ್ರದೇಶವನ್ನು ತೋಟಗಾರಿಕೆಗೆ ತರಬೇಕೆಂದು ಯೋಜನೆ ರೂಪಿಸಲಾಗಿದ್ದು, ಇದರಿಂದ ರೈತರ ಆದಾಯ ಹೆಚ್ಚಾಗಲಿದೆ. ತೋಟಗಾರಿಕೆ ಟೆಕ್ ಪಾರ್ಕ್ ಹಾಗೂ ರೈಸ್ ಪಾರ್ಕ್ ಸ್ಥಾಪನೆಯಿಂದಾಗಿಯೂ ಜಿಲ್ಲೆಯ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರಗಳಲ್ಲಿ ಹೆಚ್ಚಿನ ಅಭಿವೃದ್ಧಿಯಾಗಲಿದೆ ಎಂದರು.

**ರಾಷ್ಟ್ರಮಟ್ಟದ ಪ್ರಶಸ್ತಿಗಾಗಿ ಜಿಲ್ಲಾಧಿಕಾರಿಗಳಿಗೆ ಸನ್ಮಾನ:** 2023–24ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ರಾಷ್ಟ್ರಮಟ್ಟದ ಪ್ರಶಸ್ತಿ ಲಭಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅವರಿಗೆ ಬೆಂಗಳೂರಿನ ಐಎಟಿ ಸಂಸ್ಥೆ, ಕೊಪ್ಪಳ ಜಿಲ್ಲಾ ಕೃಷಿಕ ಸಮಾಜ ಹಾಗೂ ಕೃಷಿ ಇಲಾಖೆಯಿಂದ ಸನ್ಮಾನಿಸಲಾಯಿತು.

**ಪೋಸ್ಟರ್ ಬಿಡುಗಡೆ ಹಾಗೂ ಬಿತ್ತನೆ ಬೀಜ ವಿತರಣೆ:** ಕೃಷಿ ಇಲಾಖೆಯಿಂದ ಹೊರತಂದಿರುವ ಡಿಎಪಿ ಬದಲಾಗಿ ಇತರೆ ರಸಗೊಬ್ಬರ ಬಳಕೆಯ ಮಾಹಿತಿಯ ಮತ್ತು ದೇಶಿ ತಳಿಯ ಸಂರಕ್ಷಣೆ ಕುರಿತಾದ ಮಾಹಿತಿಯ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮುಂಗಾರು ಹಂಗಾಮಿನ ಬಿತ್ತನೆ ಬೀಜಗಳನ್ನು ರೈತರಿಗೆ ಸಾಂಕೇತಿಕವಾಗಿ ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಂಟಿ ಕೃಷಿ ನಿರ್ದೇಶಕರಾದ ಟಿ.ಎಸ್. ರುದ್ರೇಶಪ್ಪ, ಕೃಷಿಕ ಸಮಾಜದ ಕೊಪ್ಪಳ ಜಿಲ್ಲಾಧ್ಯಕ್ಷರಾದ ಶೇಖರಗೌಡ ಮಾಲಿ ಪಾಟೀಲ್, ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ಶಿವಣ್ಣ ಮೂಲಿಮನಿ, ಬೆಂಗಳೂರಿನ ಐಎಟಿ ಕಾರ್ಯದರ್ಶಿ ವೀರಣ್ಣ ಕಂತಾರ, ಗಂಗಾವತಿಯ ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥರಾದ ರಾಘವೇಂದ್ರ ಯಲಿಗಾರ ಹಾಗೂ ವಿಜ್ಞಾನಿಗಳು ಕೃಷಿಕ ಸಮಾಜದ ಸದಸ್ಯರು, ಮುನಿರಾಬಾದ್ ತೋಟಗಾರಿಕೆ ಮಹಾವಿದ್ಯಾಲಯದ ಅಧಿಕಾರಿಗಳು, ಕೃಷಿ ಇಲಾಖೆಯ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಸಹಾಯಕ ನಿರ್ದೇಶಕರು ಸೇರಿದಂತೆ ಕೃಷಿ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

**ವಿಕಸಿತ ಕೃಷಿ ಸಂಕಲ್ಪ ಅಭಿಯಾನಕ್ಕೆ ಚಾಲನೆ:** ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಕೃಷಿ ಇಲಾಖೆಯಿಂದ ಆಯೋಜಿಸಲಾಗಿರುವ ವಿಕಸಿತ ಕೃಷಿ ಸಂಕಲ್ಪ ಅಭಿಯಾನಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿ.ಪಂ ಸಿಇಓ, ಜಿಲ್ಲಾ ಕೃಷಿಕ ಸಮಾಜದವರು, ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸೇರಿ ಮತ್ತಿತರರಿದ್ದರು.

# ಗ್ರಾಮ ದೇವತೆ ಶ್ರೀ ಊರಮ್ಮ ಜಾತ್ರೆಯ ಪೂರ್ವಭಾವಿ ಸಭೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ದೇಶದಲ್ಲೇ ಮೊದಲು ಸಾರ್ವಜನಿಕರ ಹಕ್ಕುಪತ್ರಗಳನ್ನು ನೀಡುವ ರಾಜ್ಯವಾಗಿ ಕರ್ನಾಟಕ ಹೊರ ಹೊಮ್ಮಿದೆ ಈ ಸಾಧನೆ ಕಾಂಗ್ರೆಸ್ ನೇತೃತ್ವದ ಸಿಎಂ ಸಿದ್ದರಾಮಯ್ಯ ಅವರಿಗೆ ಸಲ್ಲಬೇಕು ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಕಾಂಗ್ರೆಸ್ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶ ಹಾಗೂ ಗ್ರಾಮ ದೇವತೆ ಶ್ರೀ ಊರಮ್ಮ ಜಾತ್ರೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಸ್ವಾತಂತ್ರ್ಯ ನಂತರ ಇಲ್ಲಿಯವರೆಗೆ ಆಡಳಿತ ನಡೆಸಿದ ಎಲ್ಲಾ ಸರ್ಕಾರಗಳಿಗೂ ಆಗದ ಕಾರ್ಯಕ್ರಮವನ್ನು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನ ಸಾಮಾನ್ಯರಿಗೆ ಹಕ್ಕುಪತ್ರಗಳನ್ನು ನೀಡುವ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಲಕ್ಷಕ್ಕೂ ಅಧಿಕ ಜನರಿಗೆ ಅನುಕೂಲವಾಗಲಿದೆ. ಹೊಸಪೇಟೆಯಲ್ಲಿ ಇದೇ 20 ರಂದು ಜರುಗುವ ಈ ಕಾರ್ಯಕ್ರಮದಲ್ಲಿ ಹಕ್ಕುಪತ್ರ ನೀಡುವುದು, ಪೋಡಿ, ಗೃಹಲಕ್ಷ್ಮಿ ಯೋಜನೆ ಸೇರಿದಂತೆ ಸರ್ಕಾರದ ಅನೇಕ ಯೋಜನೆಗಳ ಲಾಭ ಪಡೆಯದ ಫಲಾನುಭವಿಗಳನ್ನು ಹುಡುಕಿ ಸರ್ಕಾರದ ಯೋಜನೆಗಳನ್ನು ನೀಡುವ ಕಾರ್ಯಕ್ರಮ ಆಯೋಜಿಸಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ವರ್ಷಗಳು ಕಳೆದ ಸಂಧರ್ಭದಲ್ಲಿ ಜನ ಸಾಮನ್ಯರಿಗೆ ಸರ್ಕಾರ ಯಾವ ರೀತಿಯ ಸೌಲಭ್ಯಗಳನ್ನು ಒದಗಿಸಿದೆ ಎನ್ನುವ ಕಾರ್ಯಕ್ರಮ ಇದಾಗಿದೆ. ಕ್ಷೇತ್ರದಲ್ಲಿ ಹಕ್ಕುಪತ್ರ ಸೇರಿದಂತೆ ವಿವಿಧ ಯೋಜನೆಗಳ ಲಾಭ ಪಡೆದ ಎಲ್ಲಾ ಫಲಾನುಭವಿಗಳು ಹೊಸಪೇಟೆಗೆ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. 15 ವರ್ಷಗಳ ನಂತರ ಪಟ್ಟಣದಲ್ಲಿ ನಡೆಯುವ ಊರಮ್ಮ ಜಾತ್ರಾ ಮಹೋತ್ಸವಕ್ಕೆ ವಿದ್ಯುತ್, ಕುಡಿಯುವ ನೀರು ಸೇರಿದಂತೆ ಸೂಕ್ತ ಪೋಲಿಸ್ ಬಂದೋಬಸ್ತ್ ಕೈಗೊಳ್ಳಲು ಸಂಭಂದಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ತಹಸೀಲ್ದಾರ್ ವಿ.ಕೆ.ನೇತ್ರಾವತಿ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ತಾಪಂ ಇಒ ಕೆ. ನರಸಪ್ಪ, ಸಿಪಿಐ ಪ್ರಲ್ಹಾದ್ ಆರ್. ಚೆನ್ನಗಿರಿ ಸೇರಿದಂತೆ ಅಧಿಕಾರಿಗಳಿದ್ದರು




# ಅನಾಹುತಗಳನ್ನು ತಡೆಗಟ್ಟಲು ಜಾಗೃತಿ ಅಭಿಯಾನ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತುತ ದೇಶದಲ್ಲಿ ಯುದ್ಧ ಸಂಭವಿಸುವ ವಿದ್ಯಮಾನ ಗಳನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರದ ಕೇಂದ್ರ ಗೃಹ ಸಚಿವಾಲಯ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದಂತೆ ಮುಂದೆ ಆಗಬಹು ದಾದ ಎಲ್ಲಾ ರೀತಿಯ ಅನಾಹುತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತೆ ಮೂಡಿಸಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ವತಿಯಿಂದ ಅಪರೇಶನ್ ಅಭ್ಯಾಸ್ ಅಡಿ ನಾಗರಿಕ ರಕ್ಷಣಾ ಕಾರ್ಯಚರಣೆಯ ಅಣುಕು ಪ್ರದರ್ಶನವನ್ನು ಶನಿವಾರ ಸಂಡೂರಿನ ತೋರಣಗಲ್ಲು ಬಳಿಯ ಜೆಎಸ್‌ಡಬ್ಲ್ಯೂ ವಿಜಯನಗರ ಟೌನ್‌ಶಿಪ್ ನಲ್ಲಿ ಹಮ್ಮಿಕೊಳ್ಳಲಾಯಿತು.

ಅಣುಕು ಪ್ರದರ್ಶನದಲ್ಲಿ ನುರಿತ ಅಗ್ನಿಶಾಮಕ ಇಲಾಖೆ, ಪೋಲಿಸ್ ಇಲಾಖೆ ಹಾಗೂ ಜೆಎಸ್‌ಡಬ್ಲ್ಯೂ ನ ಕ್ಯೂಆರ್‌ಟಿ, ಸಂಶೋಧನಾ ಮತ್ತು ರಕ್ಷಣೆ, ವಿಮಾನ ನಿಲ್ದಾಣ ಭದ್ರತಾ ತಂಡ,



ಶ್ವಾನದಳ, ಅಗ್ನಿಶಾಮಕ ದಳದ ತಂಡ ಮತ್ತು ಇತರೆ ತಂಡ ಒಳಗೊಂಡಂತೆ ಸುಮಾರು 100ಕ್ಕೂ ಹೆಚ್ಚು ಸಿಬ್ಬಂದಿಗಳು ಅಣುಕು ಪ್ರದರ್ಶನ ನಡೆಸಿಕೊಟ್ಟರು.

ಅಣುಕು ಪ್ರದರ್ಶನದಲ್ಲಿ ಅನಾಹುತ ಸಂಭವಿಸಿದಲ್ಲಿ ಕೈಗೊಳ್ಳಬಹುದಾದ ಪ್ರಥಮ ಚಿಕಿತ್ಸಾ ಕಾರ್ಯ, ಸುರಕ್ಷಿತ ಸ್ಥಳದಲ್ಲಿ ಅಡಗುವಿಕೆ, ಶ್ವಾನಗಳ ಕಾರ್ಯಾ ಚರಣೆ ಹಾಗೂ ಇತರೆ ಮಾಹಿತಿಯನ್ನು ಸಾರ್ವಜ ನಿಕರಿಗೆ ತಿಳಿಯಪಡಿಸಲಾಯಿತು.

ಸಹಾಯಕ ಆಯುಕ್ತ ಪಿ.ಪ್ರಮೋದ್, ತೋರಣಗಲ್ಲು ವಿಭಾಗ ಡಿ.ಎಸ್.ಪಿ ಪ್ರಸಾದ್ ಗೋಖಲೆ ಸೇರಿದಂತೆ ಆರೋಗ್ಯ ಇಲಾಖೆ, ಕಾರ್ಖಾನೆಗಳು ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಗೃಹ ರಕ್ಷಕದಳ ಅಧಿಕಾರಿಗಳು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿ ಗಳು, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರು, ಸಾರ್ವಜನಿಕರಿದ್ದರು.